


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 282 Wednesday 23-07-2025 E-mail : maruti.b.hosamani76@gmail.com Page: 4 Price : Rs. 1/-


## ದಲಿತ ಪರ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ಪುರಸಭೆಯ ಅಧ್ಯಕ್ಷರ ವಿರುದ್ಧ – ಕ್ರಿಮಿನಲ್ ಮೊಕದ್ದಮ್ಮೆ ದಾಖಲಿಸಲು ಆಗ್ರಹ



**ಸಿಹಿ ಕಹಿ ಸುದ್ದಿ, ಮುದ್ದೇಬಿಹಾಳ :** ಪಟ್ಟಣದ ಪುರಸಭೆ ಅಧ್ಯಕ್ಷ ಮಹಿಬೂಬ್ ಗೊಳಸಂಗಿ ಅವರು ದಲಿತ ಸಮುದಾಯದ ಹೋರಾಟಗಾರರನ್ನು ಅವಮಾನಿಸಿದ್ದು ಅಲ್ಲದೆ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂಬುದನ್ನು ಸುಳ್ಳು ಆರೋಪ ಮಾಡಿರುವುದನ್ನು ಖಂಡಿಸಿ ಇಲ್ಲಿನ ದಲಿತ ಪರ ಸಂಘಟನೆಗಳ ಒಕ್ಕೂಟದಿಂದ ಸೋಮವಾರ ತಮಟೆ ಚಳುವಳಿ ಪ್ರತಿಭಟನೆಯನ್ನು ನಡೆಸಲಾಯಿತು. ಪಟ್ಟಣದ ಪುರಸಭೆಗೆ ಆಗಮಿಸಿದ್ದ ಪ್ರತಿಭಟನಾಕಾರರು ಪುರಸಭೆ ಅಧ್ಯಕ್ಷರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರ ಹಾಕಿದರು. ದ.ಸಂ.ಸ ಜಿಲ್ಲಾ ಸಂಚಾಲಕ ಹರೀಶ್ ನಾಟೇಕರ್ ಮಾತನಾಡಿ. ಪುರಸಭೆ ಅಧ್ಯಕ್ಷರು ಪದೇ ಪದೇ ಜಾತಿ ನಿಂದಣೆ ಹಾಗೂ ಅವಹೇಳನಕಾರಿಯಾಗಿ ಮಾತನಾಡಿದ್ದು. ಇವರ ಮೇಲೆ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಬೇಕು.

ತಾಲೂಕು ಪಂಚಾಯಿತಿ ವಸತಿ ಗೃಹ ನೆಲಸಮ ಮಾಡಿದ್ದು ಮತ್ತು ಸರ್ಕಾರದ ಆಸ್ತಿಯನ್ನು ಹಾನಿ ಮಾಡಿದ್ದಕ್ಕಾಗಿ ಇವರ ಮೇಲೆ ಕೂಡಲೇ ಸರ್ಕಾರದಿಂದ ಕ್ರಿಮಿನಲ್ ಕೇಸ್ ದಾಖಲಿಸ ಬೇಕು ಎಂದು ಒತ್ತಾಯಿಸಿದರು. ಅಧ್ಯಕ್ಷರ ಮೇಲೆ ದೌರ್ಜನ್ಯ ಗುಂಡಾ ಕಾಯ್ದೆ ಕೋಮು ಗಲಭೆ ಕೇಸ್ ದಾಖಲಿಸಿ ಇವರನ್ನು ಜಿಲ್ಲೆಯಿಂದ ಗಡಿಪಾರು ಮಾಡಬೇಕು. ಮತ್ತು ದಲಿತ ಸಂಘಟನೆ ನಾಯಕರಿಗೆ ತೇಜೋವಧೆ ಮಾಡಿರುವ ಇವರ ಮೇಲೆ ಮಾನನಷ್ಟ ಮೊಕದ್ದಮೆ ಜಾತಿ ನಿಂದಣೆ ಕೇಸ್ ದಾಖಲಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದರು. ಅಂಬೇಡ್ಕರ್ ಸೇನೆ ತಾಲೂಕ ಅಧ್ಯಕ್ಷ ಪ್ರಕಾಶ್ ಚಲವಾದಿ. ಆನಂದ್ ಮುದುರ್. ಬಸವರಾಜ್ ಸರೂರ್. ಪರಶುರಾಮ್ ನಲತ್ವಾಡ. ಸಂಜು ಬಾಗೇವಾಡಿ. ಪ್ರಶಾಂತ್ ಕಾಳೆ. ಶಿವು ಕನ್ನೊಳ್ಳಿ. ಬಾಲಚಂದ್ರ ಹುಲ್ಲೂರ್. ಹನುಮಂತ ಗುಂಡಕರ್ಜಗಿ. ಸೇರಿದಂತೆ ಇನ್ನೂ ಹಲವು ದಲಿತ ಮುಖಂಡರು ಪಾಲ್ಗೊಂಡಿದ್ದರು. ಇದೇ ವೇಳೆಯಲ್ಲಿ ಮುಖ್ಯ ಅಧಿಕಾರಿ ಮಲ್ಲನಗೌಡ ಬಿರಾದಾರಗೆ ಮನವಿ ಸಲ್ಲಿಸಿದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಬಸವರಾಜ.ಸಂಕನಾಳ.ಮುದ್ದೇಬಿಹಾಳ**

## ಕ್ಷಮೆಯ ಮೂರುತಿ ಶ್ರೀಮಾತೆ ಶಾರದಾದೇವಿ – ಶ್ರೀಮತಿ ಜಿ.ಯಶೋಧಾ ಪ್ರಕಾಶ್ ಅಭಿಪ್ರಾಯ

**ಸಿಹಿ ಕಹಿ ಸುದ್ದಿ,**

**ಚಳ್ಳಕೆರೆ :** ಕ್ಷಮೆಯ ಮೂರುತಿ ಶ್ರೀಮಾತೆ ಶಾರದಾದೇವಿಯವರು ಎಂದು ಚಳ್ಳಕೆರೆಯ ಶ್ರೀಶಾರದಾಶ್ರಮದ ಸದ್ಭಕ್ತರಾದ ಶ್ರೀಮತಿ ಜಿ.ಯಶೋಧಾ ಪ್ರಕಾಶ್ ತಿಳಿಸಿದರು. ಶಿವ ನಗರದ ಶ್ರೀಶಾರದಾದೇವಿ ಸತ್ಸಂಗ ಕೇಂದ್ರದಲ್ಲಿಹಮ್ಮಿಕೊಂಡಿದ್ದ ವಾರದ ಸತ್ಸಂಗ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು "ಶ್ರೀಶಾರದಾದೇವೀ ಜೀವನಗಂಗಾ" ಗ್ರಂಥ ಪಾರಾಯಣ ಮಾಡುತ್ತ ಮಾತನಾಡಿದರು. ಶ್ರೀಮಾತೆಯವರು ಇತರರ ದೋಷಗಳನ್ನು ಗುರುತಿಸದೆ ಅವರ ಸದ್ಗುರುಗಳನ್ನು ಗುರುತಿಸಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು.



ಅವರ ಈ ಗುಣ ನಮ್ಮೆಲ್ಲರಿಗೂ ಮಾದರಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀಶಾರದಾಶ್ರಮದ ಸದ್ಭಕ್ತರಿಂದ ಸಾಮೂಹಿಕ ಶ್ರೀದೇವಿಸ್ತುತಿ ಪಾರಾಯಣ ಮತ್ತು ಶ್ರೀಮತಿ ಭ್ರಮರಂಭಾ ಮಂಜುನಾಥ ಅವರಿಂದ ವಿಶೇಷ "ಬಸವ ಭಜನಾ" ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಶ್ರೀಶಾರದಾಶ್ರಮದ ಸದ್ಭಕ್ತರಾದ ಶ್ರೀಮತಿ ಅನಿತಾ ಯಾದವರೆಡ್ಡಿ, ತ್ರಿವೇಣಿ, ನಯನ, ಶಾಂತಮ್ಮ ಶಾಂತವೀರಪ್ಪ, ನಾಗರತ್ನಮ್ಮ, ವೀರಮ್ಮ ಬಸವರಾಜ, ಯತೀಶ್ ಎಂ ಸಿದ್ದಾಪುರ, ಕವಿತಾ ಗುರುಮೂರ್ತಿ, ವಿಜಯಲಕ್ಷ್ಮಿ, ಶೈಲಜ ಶ್ರೀನಿವಾಸ್, ರಶ್ಮಿ ವಸಂತ, ಸಂಗೀತ ವಸಂತಕುಮಾರ್, ಜಯಮ್ಮ ಸೇರಿದಂತೆ ಸದ್ಭಕ್ತರು ಭಾಗವಹಿಸಿದ್ದರು.

**ವರದಿ–ಯತೀಶ್ ಎಂ ಸಿದ್ದಾಪುರ, ಚಳ್ಳಕೆರೆ.**

## ಡೆಥ್ ಸರ್ಟಿಫಿಕೇಟ್ – ಚಿತ್ರೀಕರಣ ಮುಕ್ತಾಯ

**ಸಿಹಿ ಕಹಿ ಸುದ್ದಿ,**

**ಬೆಂಗಳೂರು :** ಶ್ರೀಗೌರಿ ಕಂಬೈನ್ಸ್ ಇವರ ಮೂರನೆಯ ಕಾಣಿಕೆ 'ಡೆಥ್ ಸರ್ಟಿಫಿಕೆಟ್' ಚಲನ ಚಿತ್ರದ ಚಿತ್ರೀಕರಣವು ಸದ್ದಿಲ್ಲದೆ ಭರದಿಂದ ಸಾಗಿ ಮುಕ್ತಾಯ ಗೊಂಡಿದೆ.

ಸಿದ್ದನಕೊಳ್ಳದ ಪೂಜ್ಯಶ್ರೀ ಡಾ, ಶಿವಕುಮಾರ ಸ್ವಾಮೀಜಿ ಕ್ಯಾಮರಾ ಚಾಲನೆ, ಹುನಗುಂದ ಮತ ಕ್ಷೇತ್ರದ ಜನಪ್ರಿಯ ಶಾಸಕರು ಹಾಗೂ ವೀರಶೈವ ಲಿಂಗಾಯತ ಅಭಿವೃದ್ದಿ ಮಂಡಳಿಯ ಅಧ್ಯಕ್ಷರಾದ ಮಾನ್ಯ ವಿಜಯಾನಂದ ಕಾಶಪ್ಪನವರು ಕ್ಲ್ಯಾಪ್ ಮಾಡುವ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿದ್ದರು. ಉತ್ತರ ಕರ್ನಾಟಕದ ನೈಜ ಭಾಷೆ, ವಾಸ್ತವಿಕ ಕಥಾ ಹಂದರ, ಗ್ರಾಮೀಣತೆಯ ಸೊಗಡು, ಮೇಕಪ್ ರಹಿತ ಕಲಾವಿದರು ಮುಂತಾದ ವೈಶಿಷ್ಟ್ಯಗಳಿಂದ ಕೂಡಿರುವ ಈ ಚಿತ್ರವು ಸಮಾಜಕ್ಕೆ ಉತ್ತಮ ಸಂದೇಶ ಸಾರುವ ಭರವಸೆ ಮೂಡಿಸುತ್ತದೆ.





ಹುನಗುಂದ ತಾಲೂಕಿನ ವೀರಾಪುರ ಹಾಗೂ ಇನ್ನಿತರ ಸ್ಥಳಗಳಲ್ಲಿ ಸತತ ಚಿತ್ರೀಕರಣವನ್ನು ನಡೆಸಿ ಒಂದೇ ಹಂತದಲ್ಲಿ ಚಿತ್ರೀಕರಣ ಮುಕ್ತಾಯ ಗೊಳಿಸಲಾಗಿದೆ. ನೈಜ ಘಟನೆಯನ್ನು ಕಥೆಯಾಗಿ ಬರೆದ ಮಹಾಂತೇಶ ಹಳ್ಳೂರ ಕಥೆ, ಚಿತ್ರಕಥೆ ಸಂಭಾಷಣೆಯನ್ನು ಬರೆದಿದ್ದಾರೆ. ಛಾಯಾ ಗ್ರಹಣದ ಜೊತೆ ನಿರ್ದೇಶನದ ಹೊಣೆಯನ್ನು ಗುರುದತ್ತ ಮುಸುರಿ, ನಾಯಕ ನಟನ ಪಾತ್ರದೊಂದಿಗೆ ಚಿತ್ರ ನಿರ್ಮಾಣವನ್ನು ಮನ್ವಿತ್.ಎಸ್ ವಹಿಸಿ ಕೊಂಡಿದ್ದಾರೆ. ಸಹಾಯಕ ನಿರ್ದೇಶನ ಶೇಷಗಿರಿ ಸಂಕಲನ, ಡಿಸೈನ್ ಅನೀಲ, ಸಹ ನಿರ್ದೇಶನ ಬಸಲಿಂಗಪ್ಪ ತೋಟದ, ಮಾಧ್ಯಮ ಸಂಪರ್ಕ ಡಾ, ಪ್ರಭು ಗಂಜಿಹಾಳ ಡಾ, ವೀರೇಶ ಹಂಡಿಗಿ, ಪ್ರೊಡಕ್ಷನ್ ಮ್ಯಾನೇಜರ್ ಮಹಾಂತೇಶ ಮಠ ಆಗಿದ್ದಾ–ರೆ.

ತಾರಾಗಣದಲ್ಲಿ ಮನ್ವಿತ್, ವಿಜಯಲಕ್ಷ್ಮಿ, ಮಹಾಂತೇಶ ಹಳ್ಳೂರ, ಬಸಲಿಂಗಪ್ಪ ತೋಟದ, ಜಯದೇವ ಗಂಜಿಹಾಳ, ಪ್ರವೀಣ ಭತ್ತದ, ಬಂಡು ಕಟ್ಟಿ, ಡಾ, ಚಂದ್ರನಾಥ ಒಂಟಕುದರಿ, ಮಂಜುಶ್ರೀ ಮಣಿ, ಹನಮಂತ ಮಸ್ಕಿ, ಮಹಾಂತೇಶ ಅಂಗಡಿ, ಮಹಾಂತೇಶ ಮಠ, ಮಹಾಂತೇಶ ಅಗಸಿಮುಂದಿನ, ಮಹಾಂತೇಶ ಅಂಗಡಿ, ನಾಗಪ್ಪ ಪೂಜಾರಿ, ಚಂದ್ರಶೇಖರ ಶಾಸ್ತ್ರಿ, ಸಂಗು ಮಠ, ಬಸನಗೌಡಾ ಹಿರೇಗೌಡ್ರ, ಮಹಾಂತೇಶ ಗಜೇಂದ್ರಗಡ, ವಿನೋದ ಹೂಗಾರ, ಧವಳಚಂದ ಪವಾರ, ಅನಂತ ಬಬಲೇಶ್ವರ, ಗುಡದೂರಕಲ್ಮಠ, ಗುರು ಮಠ, ಭೀಮರಾವ್ ಹಾಗೂ ವೀರಾಪುರ ಗ್ರಾಮದ ಸಮಸ್ತ ಜನತೆ ಅಭಿನಯಿಸಿದ್ದಾರೆ. ಆದಷ್ಟು ಬೇಗ ಚಿತ್ರದ ಸಂಪೂರ್ಣ ಕೆಲಸ ಮುಗಿಸಿ ತೆರೆಗೆ ತರುವ ಯೋಚನೆ ನಿರ್ಮಾಪಕರು, ಚಿತ್ರ ತಂಡದ್ದಾಗಿದೆ.

ಡಾ, ಪ್ರಭು ಗಂಜಿಹಾಳ
ಮೊ:9448775346

## ಶಿಕ್ಷಣದಿಂದ ಸಮಾಜದಲ್ಲಿ ಬದಲಾವಣೆ

**ಗುಳೇದಗುಡ್ಡ :** ಶಿಕ್ಷಣದಿಂದ ಮಾತ್ರ ಪ್ರತಿಯೊಬ್ಬರ ಭವಿಷ್ಯದಲ್ಲಿ ಬದಲಾವಣೆ ಕಾಣಲು ಸಾಧ್ಯವಾಗುತ್ತದೆ. ಆದರ್ಶ ಬದುಕು ಬಾಳಲು ನಾವೆಲ್ಲ ಸಂಸ್ಕಾರ, ಸಂಸ್ಕೃತಿ ಅದರೊಂದಿಗೆ ಗುಣಾತ್ಮಕ ಶಿಕ್ಷಣ ಪಡೆಯುವುದು ಬಹಳಷ್ಟು ಅವಶ್ಯವಾಗಿದೆ ಎಂದು ಉದ್ಯಮಿ, ದಾನಿಗಳು ಆದ ಮೇಘರಾಜ ಪವಾರ ಹೇಳಿದರು.



ಅವರು ಪಟ್ಟಣದ ಮಡಿವಾಳಪ್ಪ ಹುಚ್ಚಪ್ಪ ಆಡಿನ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಾಲೆಯಲ್ಲಿ ಆಯೋಜಿಸಿದ್ದ ಮಕ್ಕಳಿಗೆ ಕಲಿಕಾ ಸಾಮಗ್ರಿಗಳ ವಿತರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಮಕ್ಕಳು ಅಭ್ಯಾಸದ ಕಡೆಗೆ ಆಸಕ್ತಿ ವಹಿಸಿ ಗುಣಾತ್ಮಕ ಶಿಕ್ಷಣ ಪಡೆಯಬೇಕು. ಉತ್ತಮ ಸಂಸ್ಕಾರ, ಸಂಸ್ಕೃತಿ ಮಕ್ಕಳಲ್ಲಿ ಬೆಳೆಸಬೇಕು ಎಂದರು. ಶಾಲೆಯ ಮುಖ್ಯ ಶಿಕ್ಷಕ ಪಿ.ಆರ್.ಬಂತಲ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರ್ಕಾರ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಶಿಕ್ಷಣದಿಂದ ಯಾರೊಬ್ಬರೂ ವಂಚಿತರಾಗಬಾರದು ಎನ್ನುವ ಉದ್ದೇಶದಿಂದ ಶಿಕ್ಷಣಕ್ಕಾಗಿ ಸಾಕಷ್ಟು ಯೋಜನೆಗಳನ್ನು ನೀಡುತ್ತಿದೆ. ಅದರೊಂದಿಗೆ ದಾನಿಗಳು ನೀಡುವ ಕಲಿಕಾ ಸಾಮಗ್ರಿಗಳನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ನಾಗರಾಜ ದೊಡಮನಿ, ಮಹಾಲಿಂಗಪ್ಪ ಕರನಂದಿ, ಡಾಯಮಾ, ಕೂಡ್ಲೆಪ್ಪ ರಂಜಣಗಿ, ಮಲ್ಲಿಕಾರ್ಜುನ ಹಿರೇಮಠ, ಎಸ್.ಎಸ್.ಶೀಪ್ರಿ, ವಿವೇಕಾನಂದ ದೇವಾಂಗಮಠ ಸೇ–ರಿದಂತೆ ಇತರರು ಇದ್ದರು.

## ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ ನವನಗರ ಸ.ಪ್ರ.ದ ಕಾಲೇಜಿಗೆ 50 ಕಂಪ್ಯೂಟರ್ ನೀಡುವ ಭರವಸೆ ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ನಾಯಕತ್ವದಿಂದ ಕಾಲೇಜು ಬೆಳವಣಿಗೆ ಸಾಧ್ಯ : ನಾರಾಯಣಸಾ ಭಾಂಡಗೆ

**ಬಾಗಲಕೋಟೆ :** ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ನಾಯಕತ್ವದಿಂದ ಕಾಲೇಜು ಬೆಳವಣಿಗೆ ಸಾಧ್ಯವಾಗಿದ್ದು, ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರಾಜ್ಯದಲ್ಲಿಯೇ ಮಾದರಿಯಗಿದೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ ಅವರು ಹೇಳಿದರು.

ಸೋಮವಾರ ಮುಂಜಾನೆ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ, ವೀಕ್ಷಣೆ ಮಾಡಿ ಮಾತನಾಡಿದ ಅವರು ಪ್ರಾಚಾರ್ಯರಾದ ಡಾ.ಅರುಣ–ಕುಮಾರ ಗಾಳಿ ಅವರಿಂದ ಮಾಹಿತಿ ಪಡೆದು, ಇಲ್ಲಿ ಸುಮಾರು 2800 ಸಾವಿರ ವಿದ್ಯಾರ್ಥಿಗಳು ವಿವಿಧ ಕೋರ್ಸಗಳಲ್ಲಿ ಓದುತ್ತಿರುವುದು ಸಂತಸ ತಂದಿದೆ. ಇಲ್ಲಿ ಪದವಿ ಓದುತ್ತಿರುವ ಎಲ್ಲಾ ವಿದ್ಯಾರ್ಥಿಗಳ ಶೈಕ್ಷಣಿಕ ಸೌಲಭ್ಯ ಪಡೆಯಲು ಪೂರಕವಾಗಿ ನಮ್ಮ ಅನುದಾನದಲ್ಲಿ ಸುಮಾರು 50 ಕಂಪ್ಯೂಟರ್‌ಗಳನ್ನು ನೀಡಲು ಭರವಸೆ ನೀಡಿದರು. ನಾನು ಕಳೆದ ಒಂದೆರಡು



ವಾರದಿಂದ ವಿವಿಧ ದಿನ ಪತ್ರಿಕೆಗಳಲ್ಲಿ ಮತ್ತು ಟಿ.ವಿ ಮಾಧ್ಯಮಗಳಲ್ಲಿ ನಮ್ಮ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳ ಸಾಲುಗಟ್ಟಿ ನಿಂತಿರುವುದು ನೋಡಿದರೆ ಇಲ್ಲಿ ಉತ್ತಮ ಆಡಳಿತ, ಗುಣಮಟ್ಟದ ಬೋಧನೆ, ಓದಲು ಪ್ರಶಾಂತವಾಗಿರುವ ಗ್ರಂಥಾಲಯ, ಕ್ರೀಡಾ ವಿಭಾಗದ ಚಟುವಟಿಕೆಗಳು, ಎನ್.ಸಿ.ಸಿ, ಎನ್.ಎಸ್.ಎಸ್, ಭಾರತ ಸ್ಕೌಟ್ಸ್ & ಗೈಡ್ಸ್ ಘಟಕಮತ್ತುಬೋಧಕೇತರಸಿಬ್ಬಂದಿಯವರ ಪರಿಶ್ರಮ ಮೆಚ್ಚುವಂತದ್ದಾಗಿದೆ. ಇಂದು ವಿದ್ಯಾರ್ಥಿಗಳು ಸರ್ಕಾರಿ ಕಾಲೇಜುಗಳಲ್ಲಿ ಓದುವ ಮನೋಭಾವ ಹೊಂದಿರುವುದಕ್ಕೆ ಕಾರಣ ಈ ಕಾಲೇಜು ಪರಿಸರದ ಶಿಸ್ತು ವಿದ್ಯಾರ್ಥಿಗಳ ಮೇಲೆ ಪ್ರೇರಣೆ ಮತ್ತು ಪ್ರಭಾವ ಬಿರಿದೆ. ಇಲ್ಲಿ ಕಲಿಯುವ ಮಕ್ಕಳಿಗೆ ಉದ್ಯೋಗಾವಕಾಶ ಕಲ್ಪಿಸುವ ಕೆಲಸ ಶ್ಲಾಘನಿಯವಾಗಿದೆ ಉತ್ತಮ ನಾಯಕತ್ವ ಹಾಗೂ ಇಚ್ಛಾಶಕ್ತಿ ಇದ್ದರೆ ಸರ್ಕಾರಿ ಕಾಲೇಜುಗಳು ಎಷ್ಟು ಎತ್ತರಕ್ಕೆ ಬೆಳೆಬಹುದೆಂದು ಪಾಚಾರ್ಯ ಡಾ.ಅರುಣಕುಮಾರ ಗಾಳಿ ಅವರು ತೋರಿಸಿಕೊಟ್ಟಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ರಾಜ್ಯ ಸಭಾ ಸದಸ್ಯರು ಪ್ರಾಚಾರ್ಯರಿಗೆ ಸನ್ಮಾನಿಸಿದರು.

ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ ಅವರು ಮಾತನಾಡಿ, ರಾಜ್ಯಸಭಾ ಸದಸ್ಯರು ನಮ್ಮ ಕಾಲೇಜಿಗೆ ಭೇಟಿ ನೀಡಿದ್ದು ಸಂತಸವಾಗಿದೆ.

ನಮ್ಮ ನವನಗರ ಸ.ಪ್ರ.ದ.ಕಾಲೇಜು ಬೆಳವಣಿಗೆಗೆ ಸಿಡಿಸಿ ಅಧ್ಯಕ್ಷರು, ಶಾಸಕರಾದ ಹೆಚ್.ವೈ.ಮೇಟಿ ಅವರು ಹಾಗೂ ಸದಸ್ಯರ ಸಹಾಯ, ಸಹಕಾರ ಮತ್ತು ನಮ್ಮ ಕಾಲೇಜಿನ ಎಲ್ಲಾ ಬೋಧಕರು, ಬೋಧಕೇತರ ಸಿಬ್ಬಂದಿಯವರ ನಿರಂತರ ಶ್ರಮದಿಂದ ನಮ್ಮ ಕಾಲೇಜು ಬೆಳವಣಿಗೆ ಹೊಂದಲು ಸಾಧ್ಯವಾಗಿದೆ ಎಂದರು. ಇದೇ ವೇಳೆ ಕಾಲೇಜಿನ ಬೋಧಕರು, ಬೋಧಕೇತರರು ಉಪಸ್ಥಿತರಿದ್ದರು.

## ವೈದ್ಯರ ಸಮಾಜಮುಖಿ ಸೇವೆ ಸ್ಮರಣೀಯ



**ಗುಳೇದಗುಡ್ಡ :** ವೈದ್ಯರ ಸಮಾಜಮುಖಿ ಸೇವೆಯನ್ನು ಇಡೀ ಸಮಾಜವೇ ಗೌರವಿಸುತ್ತದೆ. ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ವೈದ್ಯರ ಕೊಡುಗೆ ಅನನ್ಯವಾಗಿದೆ ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ. ಎಸ್.ಐ.ರಾಜನಾಳ ಹೇಳಿದರು

ಅವರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದೇವಿ ಆರಾಧಕ ಮಲ್ಲಿಕಾರ್ಜುನ್ ಮಲ್ಲಪ್ಪ ತೋರಗಲ್ ಆಯೋಜಿಸಿದ್ದ ವಿಶ್ವ ವೈದ್ಯರ ದಿನಾಚರಣೆ ಹಾಗೂ ಅವರ ಹುಟ್ಟು ಹಬ್ಬದ ಪ್ರಯುಕ್ತ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಹಮ್ಮಿಕೊಂಡ ಗೌರವ ಸತ್ಕಾರ ಸಮಾರಂಭದಲ್ಲಿ ಸನ್ಮಾನಿಸಿ ಮಾತನಾಡಿದರು ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ನಾಗರಾಜ್ ಕುರಿ ಅವರು ಮಾತನಾಡಿ, ಸಮಾಜಕ್ಕೆ ಉಪಯುಕ್ತ ಆಗುವ ಪ್ರತಿಯೊಂದು ಕಾರ್ಯಕ್ಕೂ ನಾವು ಒಂದು ಹೆಜ್ಜೆ ಮುಂದೆ ಹೋಗಿ ಕೆಲಸ ಮಾಡಬೇಕು ಎಂದರು.

ಇದೇ ಸಂದರ್ಭದಲ್ಲಿ ದೇವಿ ಆರಾಧಕ ಮಲ್ಲಿಕಾರ್ಜುನ ತೋರಗಲ್ ಅವರು ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದ ಎಲ್ಲ ರೋಗಿಗಳಿಗೆ ಹಾಲು ಬ್ರೆಡ್ ವಿತ–ರಿಸಿದರು. ಕಾರ್ಯಕ್ರಮದಲ್ಲಿ ರಾಮಣ್ಣ ಚಂದರಗಿ, ಸಂಗಮೇಶ್ ನನ್ನಾ, ಗೊಯೇಷ ರೊಡಗ್ಯೆ, ಪರುತೆಪ್ಪ ಸೆಡ್ಲಿ, ಸತ್ಯಪ್ಪ ಜೋಗಿನ, ಈರಣ್ಣ ನನ್ನಾ ಒಳಗೊಂಡು ಇತರರು ಇದ್ದರು.

## ನೀವು ರಾಜಕರಣ ಮಾಡುವುದಿದ್ದರೆ ಮತದಾರರ ನಡುವೆ ಮಾಡಿ – ಬದಲಾಗಿ ಸಾಂವಿಧಾನಿಕ ಸಂಸ್ಥೆಗಳಲ್ಲಿ ಅಲ್ಲ ಅನ್ನುವ ಮಾತು ಸ್ಪಟಿಕ್ ದಷ್ಟೇ ಸತ್ಯವಾದ ಮಾತು

**ಸಿಹಿ ಕಹಿ ಸುದ್ದಿ,**

**ಇಳಕಲ್ಲ :** ಪ್ರಸ್ತುತ ರಾಜ್ಯ ರಾಜ–ಕಾರಣದ ವಿದ್ಯಮಾನಗಳನ್ನು ಗಮನಿಸಿದರೆ ಅನಿಷ್ಟಕ್ಕೆ ಶನೇಶ್ವರನೇ ಕಾರಣ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಕಳೆದ ಹಲವಾರು ದಿನಗಳಿಂದ ವಿರೋಧ ಪಕ್ಷಗಳು ದಿನ ನಿತ್ಯ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯರವರನ್ನು ತೇಜೋವಧೆ ಮಾಡುತ್ತಿವೆ ಇದಕ್ಕಾಗಿ ಕೇಂದ್ರ ಸರ್ಕಾರ ಸಿಬಿಐ ಮತ್ತು ಈಡಿ ಮುಂತಾದ ಸಂಸ್ಥೆಗಳನ್ನು ದುರ್ಬಳಕೆ ಮಾಡಿ ಕೊಳ್ಳುತ್ತಿದೆ, ಈ ಹಿನ್ನೆಲೆಯಲ್ಲಿ ಮೊನ್ನೆ ಸುಪ್ರೀಂಕೋರ್ಟ ಈಡಿಗೆ ಛೀಮಾರಿ ಹಾಕಿದೆ. ಮಾನ್ಯ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಅವರನ್ನು ಮಾತ್ರ ನಿರಪರಾಧಿ ಎಂದು ಸುಪ್ರೀಂಕೋರ್ಟ್ ಹೇಳಿಲ್ಲ ಬದಲಾಗಿ ಈಡೀ, ಸಿಬಿಐಗಳು ಸಂವಿಧಾನಿಕ ಸಂಸ್ಥೆಗಳು ಅವುಗಳನ್ನು ದುರ್ಬಲ ಗೊಳಿಸುವಂತಹ ಹುನ್ನಾರ ನಡೆದಿದೆ ಎಂದು ಬಿ.ಆರ್ ಗವಾಯಿ ನೇತೃತ್ವದ ದ್ವಿಸದಸ್ಯ ಪೀಠ ಚಾಟೀ



ಬೀಸಿದೆ, "ನೀವು ರಾಜಕಾರಣ ಮಾಡುವುದಿದ್ದರೆ ಮತದಾರರ ನಡುವೆ ಮಾಡಿ ಬದಲಾಗಿ ಸಾಂವಿಧಾನಿಕ ಸಂಸ್ಥೆಗಳಲ್ಲಿ ಅಲ್ಲ ಎನ್ನುವಂತಹ ಮಾತನ್ನು ಹೇಳಿ ಈಡಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದೆ" ಈಗಲಾದರೂ ಜೆಡಿಎಸ್ ಮತ್ತು ಬಿಜೆಪಿ ಎರಡು ಪಕ್ಷಗಳು ತಮ್ಮ ಆತ್ಮಾವಲೋಕನ ಮಾಡಿ ಕೊಳ್ಳಬೇಕೆಂದು ಅಹಿಂದ ವರ್ಗಗಳ ತಾಲೂಕಾ ಅಧ್ಯಕ್ಷರಾದ ವಿಜಯ ಮಹಾಂತೇಶ ಗದ್ದನಕೆರೆ ಇಲ್ಲಿನ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ವಾಗ್ದಾಳಿ ನಡೆಸಿದರು,

ಮಾನ್ಯ ಸಿದ್ದರಾಮಯ್ಯ ಅವರನ್ನು ಕಳೆದ ಬಾರಿಯೂ ಕೂಡ ಇದೇ ರೀತಿ ಲಿಂಗಾಯತ ಮತ್ತು ವೀರಶೈವ ಲಿಂಗಾಯತ ಧರ್ಮಗಳ ವಿಭಜ–ಕ ಎಂದು ಅವರ ತೇಜೋವಧೆ ಮಾಡಿ ಸರ್ಕಾರಕ್ಕೆ ಕೆಟ್ಟ ಹೆಸರು ತಂದು ತಂದಿರುವುದನ್ನು ನಾವೆಲ್ಲ ನೋಡಿದ್ದೇವೆ ಮತ್ತು ಇತ್ತೀಚೆಗೆ ನಡೆದಿರುವಂತಹ ಬೆಳವಣಿಗೆಗಳಲ್ಲಿ ಸಿ.ಸಿ ಪಾಟೀಲ್ ಹಾಗೂ ಅರವಿಂದ ಬೆಲ್ಲದವರು ಯಾವ ನೈತಿಕ ಆಧಾರದ ಮೇಲೆ ಆರೋಪಗಳನ್ನು ಮಾಡುತ್ತಿದ್ದಾರೆ ನಮಗಂತೂ ಗೊತ್ತಾಗುತ್ತಿಲ್ಲ, ಬೆಲ್ಲದ ಅವರು ಬರೀ ಹೆಸರಿಗೆ ಮಾತ್ರ ಬೆಲ್ಲದ ಆಗಬಾರದು ಬದಲಾಗಿ ಅವರ ನಾಲಿಗೆ ಕೂಡ ಬೆಲ್ಲದಂತೆ ಆಗಬೇಕು, ಪಂಚಮಸಾಲಿ ಪೀಠದ ಸ್ವಾಮೀಜಿಗಳನ್ನು ವಿಷಪ್ರಾಸನ ಮಾಡಲಾಗಿದೆ ಎಂಬ ಗಂಭೀರ ಆರೋಪ ಮಾಡಿದ್ದಾರೆ, ಯಾವುದೇ ಪೀಠದ ಸ್ವಾಮೀಜಿಗಳಾಗಿರಬಹುದು ಯಾವುದೇ ಧರ್ಮದ ಧರ್ಮ ಗುರುಗಳಾಗಿರಬಹುದು

ಎಲ್ಲರಿಗೂ ವಿಶೇಷವಾದ ಗೌರವ ಇಟ್ಟುಕೊಳ್ಳುವಂತಹವರು ಮಾನ್ಯ ಸಿದ್ದರಾಮಯ್ಯನವರು ಅದು ಹಾಲುಮತ ವರ್ಗ ಆಗಿರಬಹುದು ಅಥವಾ ಪಂಚಮಸಾಲಿ ಸಮಾಜ ಆಗಿರಬಹುದು ಎರಡು ಸಮಾಜದ ನಡುವೆ ಚನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣರ ತಾಯಿ ಮಗನ ಸಂಬಂಧ, ಇಂತಹ ಒಂದು ಸಂಬಂಧದಲ್ಲಿ ಹುಳಿ ಹಿಂಡುವಂತಹ ಹೇಳಿಕೆಗಳನ್ನು ನಿಲ್ಲಿಸಬೇಕು, ಮತ್ತು ಮುಸ್ಲಿಂ ಬೆಂಬಲಿಗರಿಂದ ಪಂಚಮಸಾಲಿ ಸ್ವಾಮೀಜಿಗಳಿಗೆ ವಿಷ ಪ್ರಾಶನ ಮಾಡಲಾಗಿದೆ ಎಂದು ಹೇಳಿಕೆ ಕೊಟ್ಟಿದ್ದಾರೆ, ಇದು ಜಾತಿ ಜಾತಿಗಳ ಮಧ್ಯೆ ಕೋಮು ಸೌಹಾರ್ದಗಳನ್ನು ಕೆಡಿಸುವಂತಹ ಹೇಳಿಕೆಗಳನ್ನು ಕೂಡಲೇ ನಿಲ್ಲಿಸಬೇಕು.


ಶ್ರೀ ವಿಜಯಾನಂದ ಕಾಶಪ್ಪನವರು ಪಂಚಮಸಾಲಿ ಸಮಾಜದ ಶಾಸಕರು ಆದರೆ ಅವರು ಎಲ್ಲ ಜಾತಿ ಜನಾಂಗದವರೊಡನೆ ಕೂಡಿ–ಕೊಂಡು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ, ಇಂತಹ ಹೇಳಿಕೆಗಳಿಂದ ಜನರ ದಾರಿ ತಪ್ಪಿಸುವ ಕೆಲಸ ಮಾಡಬಾರದು ಹಿಂದುಳಿದ ವರ್ಗ, ದಲಿತರು ಮತ್ತು ಅಲ್ಪ ಸಂಖ್ಯಾತರು ಎಲ್ಲ ಅಹಿಂದ ವರ್ಗ ಮನಸ್ಸು ಮಾಡಿದರೆ ಅವರ ಸ್ವಕ್ಷೇತ್ರದಲ್ಲಿ ಹೋಗಿ ಅವರನ್ನು ಸೋಲಿಸುವಂತಹ ಶಕ್ತಿ ಅಹಿಂದ ಸಮಾಜಕ್ಕೆ ಇದೆ ಎಂದು ಎಚ್ಚರಿಸಿದ್ದಾರೆ. ಪತ್ರಿಕಾ ಗೋಷ್ಠಿಯಲ್ಲಿ ಮಲ್ಲು ಮಡಿವಾಳರ, ಯಲ್ಲಪ್ಪ ಅಂಬಿಗೇರ, ಚಂದ್ರಶೇಖರ ಸನ್ನಿ, ಅಶೋಕ ಬಾರಿಗಿಡದ, ಅಲ್ತಾಫ ಕಲಬುರ್ಗಿ, ನೂರ ಅಹ್ಮದ ಚೋಪದಾರ, ತುಕಾರಾಂ ಭಜಂತ್ರಿ, ಮುಂತಾದ ಅಹಿಂದ ನಾಯಕರು ಭಾಗವಹಿಸಿದ್ದರು.

**ಜಿಲ್ಲಾ ಮಟ್ಟದ ವಿಶೇಷ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಅಬ್ದುಲ್.ಗಫಾರ್.ತಹಶೀಲ್ದಾರ್. ಇಲಕಲ್ಲ.ಬಾಗಲಕೋಟ**

# ಕಾಗವಾಡದಲ್ಲಿ ಶಕ್ತಿ ಯೋಜನೆಯ ಸಂಭ್ರಮ: 2 ವರ್ಷಗಳಲ್ಲಿ 500 ಕೋಟಿ ಉಚಿತ ಪ್ರಯಾಣ: ರಾಜು ಕಾಗೆ..!

**ಕಾಗವಾಡ :** ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಪಂಚ್ ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆಯಡಿ ಕಳೆದ 2 ವರ್ಷಗಳಲ್ಲಿ ಮಹಿಳಾ ಪ್ರಯಾಣಿಕರು ದಾಖಲೆಯ 500 ಕೋಟಿ ಉಚಿತ ಪ್ರಯಾಣಗಳ ಗಡಿ ದಾಟಿದ್ದು, ದಾಖಲೆ ಸೃಷ್ಟಿಸಿದೆ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಮಗದ ಅಧ್ಯಕ್ಷರು ಹಾಗೂ ಶಾಸಕರಾದ ರಾಜು ಕಾಗೆ ತಿಳಿಸಿದ್ದಾರೆ.

ಅವರು, ಸೋಮವಾರ ದಿ. 14 ರಂದು ಪಟ್ಟಣದ ಬಸ್ ನಿಲ್ದಾದಲ್ಲಿ ನಾರಿ ಶಕ್ತಿ ಸಂಭ್ರಮಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಹಿಳಾ ಪ್ರಯಾಣಿಕ-ರಿಗೆ ಸಿಹಿ ಹಂಚಿ, ಮಾತನಾಡುತ್ತಿದ್ದರು. ಶಕ್ತಿ ಯೋಜನೆ ಕೇವಲ ಉಚಿತ ಪ್ರಯಾಣ ಯೋಜನೆಯಲ್ಲ. ಇದು ಮಹಿಳಾ ಸಬಲೀಕರಣದ ಮಹತ್ವದ ಹೆಜ್ಜೆಯಾಗಿದ್ದು, ಆರ್ಥಿಕವಾಗಿ ಮಹಿಳೆಯರಿಗೆ ಸ್ವಾತಂತ್ರ್ಯ ನೀಡುವುದರ ಜೊತೆಗೆ, ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಅವರು ಹೆಚ್ಚು ಸಕ್ರಿಯವಾಗಿ ಪಾಲ್ಗೊಳ್ಳಲು



ಈ ಯೋಜನೆ ನೇರವಾಗಿದೆ. 500 ಕೋಟಿ ಪ್ರಯಾಣಗಳ ಗಡಿ ದಾಟಿರುವುದು ಈ ಯೋಜನೆಯ ಮಹತ್ವವನ್ನು ಎತ್ತಿ ತೋ-ರಿಸುತ್ತದೆ ಎಂದು ಬಣ್ಣಿಸಿದರು.

ಇದೇ ವೇಳೆ ಶಕ್ತಿ ಯೋಜನೆಯ ಯಶಸ್ಸಿಗೆ ಕಾರಣರಾದ ಸಾರಿಗೆ ಇಲಾಖೆಯ ಸಿಬ್ಬಂದಿ ಹಾಗೂ ಮಹಿಳಾ ಪ್ರಯಾಣಿಕರನ್ನು ಅಭಿನಂದಿದರು. ಅಲ್ಲದೆ, ಮಹಿಳಾ ಪ್ರಯಾಣಿಕರೊಂದಿಗೆ ಸಂವಾದ ನಡೆಸಿ, ಶಕ್ತಿ ಯೋಜನೆ ಕುರಿತು ಅವರ ಮುಕ್ತ ಅಭಿಪ್ರಾಯಗಳನ್ನು ಆಲಿಸಿದರು. ಮಹಿಳೆಯರ ಮುಖದಲ್ಲಿ ಮೂಡಿದ ಸಂತೋಷ ಮತ್ತು ಆತ್ಮವಿಶ್ವಾಸವು ಯೋಜನೆಯ ಸಾರ್ಥಕತೆಯನ್ನು ಬಿಂಬಿಸುತ್ತಿತ್ತು. ಇಡೀ ಕಾಗವಾಡ ಬಸ್ ನಿಲ್ದಾಣವು ಹಬ್ಬದ ವಾತಾವರಣದಂತೆ ಕಂಗೊಳಿಸಿತು.

ವಾಯ್ಯವ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಚಿಕ್ಕೋಡಿ ಘಟಕದ ಡಿಸಿ ಶಶಿಧರ ಬಿ.ಎಂ. ಮಾತನಾಡಿ, ಕಳೆದ 2 ವರ್ಷಗಳಲ್ಲಿ ಶಕ್ತಿ ಯೋಜನೆಯಿಂದ ರಾಜ್ಯದ ಸುಮಾರು 350 ಕೋಟಿ ಮಹಿಳೆಯರು ಸಂಸ್ಥೆಯ ವಿವಿಧ ನಿಗಮಗಳ ಉಚಿತ ಬಸ್ ಪ್ರಯಾಣದ ಲಾಭ ಪಡೆದುಕೊಂಡಿದ್ದಾರೆಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾ.ಪಂ. ಇಓ ವೀರಣ್ಣಾ ವಾಲಿ,ಸಿಡಿಪಿಓ ಸಂಜೀವಕುಮಾರ ಸದಲಗಿ, ಪ.ಪಂ. ಮುಖ್ಯಾಧಿಕಾರಿ ಕೆ.ಕೆ. ಗಾವಡೆ, ಮುಖಂಡರಾದ ಸುಭಾಶ ಪಾಟೀಲ,ಭೀಮು ಅಕಿವಾಟೆ, ಉಮೇಶ ಪಾಟೀಲ, ಜ್ಯೋತಿ-ಕುಮಾರ ಪಾಟೀಲ, ಸೌರಭ ಪಾಟೀಲ, ಕಾಕಾ ಪಾಟೀಲ, ಪ್ರಕಾಶ ಹೆಮಗೀರೆ, ಅಕ್ಷಯ ಪಾಟೀಲ, ವಿನಾಯಕ ಚೌಗುಲೆ, ರಮೇಶ ಚೌಗುಲೆ, ಚಿದಾನಂದ ಅವಟಿ, ಪವನ ಪಾಟೀಲ, ಸಾಗರ ಕಾಡಾಪೂರೆ, ಮುರಗೇಶ ಕುಂಬಾರ, ರಾವಸಾಬ ಪಾಟೀಲ, ಮಹಾಂತೇಶ ಬಡಿಗೇರ ಮತ್ತು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನಿಜಗುಣಿ ಕೇರಿ, ಸುರೇಶ ಘಸ್ತಿ, ಎ.ಎಸ್. ಅಡಳ್ಳಿಮಠ, ಎಚ್.ಕೆ. ತೇಲಿ, ಎಂ.ಎಸ್. ಗೂಡನವರ, ಜೆ.ಎಲ್. ಕೋಳಿ ಸೇರಿದಂತೆ ಮುಖಂಡರು, ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸರ್ವ ಸದಸ್ಯರು ಹಾಗೂ ನೂರಾರು ಪ್ರಯಾಣಿಕರು ಉಪಸ್ಥಿತರಿದ್ದರು.

# ಹೆಚ್.ಎಂ.ಕೆ ಕ್ಲಿನಿಕ್ ದ್ವಿತೀಯ ವಾರ್ಷಿಕೋತ್ಸಕ್ಕೆ ಮಕ್ಕಳ ಕಿವಿ ಕಣ್ಣು ಉಚಿತ ತಪಾಸಣೆ

**ಬಾದಾಮಿ :** ಬಾದಾಮಿ ನಗರದಲ್ಲಿ ಕಳೆದ ಎರಡು ವರ್ಷಗಳಿಂದ 1400 ಜನರಿಗೆ ಕಣ್ಣು, ಕಿವಿ, ಮೂಗು, ಗಂಟಲು ತಪಾಸಣೆ ಮಾಡಲಾಗಿದೆ, ಅತ್ಯಾಧುನಿಕ ಉಪಕರಣದೊಂದಿಗೆ ಪ್ರಾರಂಭವಾದ ಈ ಕ್ಲಿನಿಕ್ ಇಂದು ಎರಡು ವರ್ಷ ಯಶಸ್ವಿಯಾಗಿ ಪೂರೈಸಿದ್ದು ಸಂತಸ ತಂದಿದೆ ಎಂದು ಹೆಚ್.ಎಂ.ಕೆ ಕ್ಲಿನಿಕ್ ನ ವೈದ್ಯ ಡಾ.ಗುರುಸ್ವಾಮಿಯವರು ಹೇಳಿದರು ಅವರು ನಗರದ ಕಿತ್ತೂರ ಚನ್ನಮ್ಮ ಪ್ರಾಥಮಿಕ ಶಾಲೆಯ ಸಂಂ-ಯುಕ್ತಾಶ್ರಯದ ಶ್ರೀಗುರುಕುಲ ನವೋದಯ ತರಬೇತಿ ಕೇಂದ್ರದಲ್ಲಿ ಹೆಚ್.ಎಂ.ಕೆ ಕ್ಲಿನಿಕ್ ದ್ವಿತೀಯ ವಾರ್ಷಿಕೋತ್ಸವದನಿಮಿತ್ಯಡಾ.ಗುರುಸ್ವಾಮಿಯವರು ಮಕ್ಕಳ ಉಚಿತ ಕಣ್ಣು, ಕಿವಿ ತಪಾಸಣೆ ಮಾಡಿ ಔಷಧ ನೀಡಿ ಮಾತನಾಡಿದರು, ಪತ್ರಕರ್ತರು, ಗುರುಕುಲ ನವೋದಯದ ರೂವಾರಿಗಳಾದ ಬಸವರಾಜ ಉಳ್ಳಾಗಡ್ಡಿವರು ಮಕ್ಕಳಿಗೆ ಕಲಿಸುವ ವಿಧಾನ, ಮಕ್ಕಳ ಮಟ್ಟಕ್ಕಿಳಿದು ಕಲಿಸುವ ಕೌಶಲ್ಯವನ್ನು ಪ್ರತಿದಿನ ಸಾಮಾಜಿಕ ಜಾಲತಾಣದಲ್ಲಿ ನೋಡಿ ನಮ್ಮ ಕ್ಲಿನಿಕ್ 2ನೇ ವಾರ್ಷಿಕೋತ್ಸವಕ್ಕೆ ಅವರ ತರಬೇತಿ ಮಕ್ಕಳು ಹಾಗೂ ಕಿತ್ತೂರ ಚನ್ನಮ್ಮ ಶಾಲೆಯ ಮಕ್ಕಳಿಗೆ ಉಚಿತವಾಗಿ ಕಣ್ಣು, ಕಿವಿ, ಮೂಗು ಹಾಗೂ ಗಂಟಲು ತಪಾಸಣೆ ಮಾಡಿರುವುದು ಸಂತಸ ತಂದಿದೆ ಎಂದರು



ಪತ್ರಕರ್ತ ಬಸವರಾಜ್ ಉಳ್ಳಾಗಡ್ಡಿ ಮಾತನಾಡಿ ಡಾ.ಗುರುಸ್ವಾಮಿ ಅವರು ನಮ್ಮ ಮೇಲೆ ವಿಶ್ವಾಸ ಗೌರವವಿಟ್ಟು ನಮ್ಮ ಶಾಲೆ ಹಾಗೂ ತರಬೇತಿ ಕೇಂದ್ರದ ಮಕ್ಕಳಿಗೆ ಉಚಿತವಾಗಿ ತಪಾಸಣೆ ಮಾಡಿ ಔಷದವನ್ನು ನೀಡಿದ್ದು ಅವರಿಗೆ ಕೃತಜ್ಞತೆಗಳು ಎಂದುರು ಮುಖ್ಯಾಧ್ಯಾಪಕರ ಎಸ್.ವಿ.ಭಂಡಾರಿ ಮಾತನಾಡಿದರು, ವೇದಿಕೆಯ ಮೇಲೆ ಡಾ.ಅಂಕುಶ ರೆಡ್ಡಿ, ಡಾ.ರಮೇಶ ಡಾ. ಗೋವಿಂದರಾಜ್, ಡಾ.ರಂಜಿತ ಸೇರಿದಂತೆ ಕಿತ್ತೂರ ವನ್ನಮ್ಮ ಪ್ರಾಥಮಿಕ ಶಾಲೆಯ ಶಿಕ್ಷಕರು, ಗುರುಕುಲ ತರಬೇತಿಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

# ವಿದ್ಯಾರ್ಥಿಗಳು ಜ್ಞಾನ ಮತ್ತು ಬುದ್ಧಿಯನ್ನು ಬೆಳೆಸಿಕೊಳ್ಳಬೇಕು – ಸದಾಶಿವ ಬೆಳಗಲಿ

**ಮೂಡಲಗಿ :** ವಿದ್ಯಾರ್ಥಿಗಳು ಜ್ಞಾನ ಮತ್ತು ಬುದ್ಧಿಯನ್ನು ಬೆಳೆಸಿಕೊಳ್ಳಬೇಕು. ಇಂದು ಸಾಮಾಜಿಕ ಮಾಧ್ಯಮಗಳ ಮೂಲಕ ವಿದ್ಯಾರ್ಥಿಗಳು ಪ್ರೀತಿ, ಪ್ರೇಮ ಎಂಬ ಭಾವನೆಗಳನ್ನು ಹೊಂದಿ ನಿಜವಾದ ಬದುಕನ್ನುನಾಶಮಾಡಿಕೊಳ್ಳುತ್ತಿದ್ದುಬದುಕಿನ ಸ್ವಾರಸ್ಯವನ್ನು ಕಳೆದುಕೊಳ್ಳುವ ಬದಲು ತಂದೆತಾಯಿಗಳ ಆಸೆ ಆಕಾಂಕ್ಷೆಗಳಂತೆ ಸಾಧಕರಾಗಲು ಪ್ರಯತ್ನಿಸಬೇಕು. ಆತ್ಮ ಪರಿಶುದ್ಧಿ ಮಾಡಿಕೊಂಡು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳುವಂತೆ ನಿರಂತರ ಅಧ್ಯಯನ ಗುರು ಭಕ್ತಿ ತೋರಿಸಿ ಸಾಧನೆಯ ಶೀಖರವನ್ನೇರಲು ಪ್ರಯತ್ನಿಸುವಂತೆ ನಾಗನೂರಿನ ಸರಕಾರಿ ಪ್ರೌಢ ಶಾಲೆಯ ಸಹಶಿಕ್ಷಕ ಸದಾಶಿವ ಬೆಳಗಲಿ ಹೇಳಿದರು.

ಪಟ್ಟಣದ ಆರ್.ಡಿ.ಎಸ್. ಪದವಿ ಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ 2025-26 ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ, ಕ್ರೀಡೆ, ಸಾಂಸ್ಕೃತಿ-ಕ ಚಟುವಟಿಕೆ ಹಾಗೂ ಎನ್‌ಎಸ್-ಎಸ್, ಸ್ಕೌಟ್ಸ್, ರೆಡ್ ಕ್ರಾಸ್ ಘಟಕಗಳ ಉದ್ಘಾಟನಾ ಸಮಾರಂಭ ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಪ್ರತಿಜ್ಞಾ ವಿಧಿ ಬೋಧನೆ ಕಾರ್ಯಕ್ರಮದಲ್ಲಿ ಅತಿಥಿ-ಯಾಗಿ ಮಾತನಾಡಿನೌಕರರಾಗುವ ಬದಲು ಮಾಲಿಕರಾಗುವ ಹಾಗೂ ಹಳೆಯ ಸಾಂಪ್ರದಾಯಕ ಸಾವಯುವ ಕೃಷಿಯ ಸಾಧಕರಾಗಿ ಬೆಳೆದು ಸ್ವಾವಲಂಬನೆ ಜೀವನಕ್ಕೆ ತೊಡುಗುವಂತೆ ಸಲಹೆ ನೀಡುತ್ತಾ ಬ್ರಿಟಿಷರ ಕಾಲದಲ್ಲಿ ಭಾರತ ವಿಶ್ವ ದರ್ಜೆಯ ಶೈಕ್ಷಣಿಕ ಅಭಿವೃದ್ಧಿ ಹೊಂದಿತ್ತು. ನಂತರ ಬ್ರಿಟಿಷ್ ಪ್ರಾಬಲ್ಯ ಭಾರತೀಯರ ಸ್ವಾವಲಂಬನೆ ಶಿಕ್ಷಣಕ್ಕೆ ಅಡೆತಡೆ ನೀಡಿತು. ನಮ್ಮ ಪೂರ್ವಜರ ಸ್ವಾಭಿಮಾನ ಶಿಕ್ಷಣಕ್ಕೆ ಆದ್ಯತೆ ನೀಡೋಣ ಎಂದರು.

ಇನ್ನೋರ್ವ ಅತಿಥಿ ಅರಳಿಮಟ್ಟಿ ಸರಕಾರಿ ಪ್ರೌಢ ಶಾಲೆಯ ಸಹಶಿಕ್ಷಕ ಮಹಾಂತೇಶ ಕುಂಬಾರ ಮಾತನಾಡಿ, ಗುರುಭಕ್ತಿ ವಿದ್ಯಾರ್ಥಿಗಳ ಬದುಕಿನಲ್ಲಿ ಆದರಣೀಯವಾಗಿದ್ದು ಅದರ ಜೊತೆಗೆ ಸಮಯ ಪಾಲನೆ ಹಾಗೂ ಶೈಕ್ಷಣಿಕ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಎಲ್ಲಕ್ಷೇತ್ರಗಳಲ್ಲಿಸಾಧನೆಯಅವಕಾಶಗಳಿದ್ದು ಅವುಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಅಧ್ಯಕ್ಷತೆಯನ್ನು ಆರ್.ಡಿ.ಎಸ್. ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಸಂತೋಷ ಪಾರ್ಶಿ ವಹಿಸಿಕೊಂಡು ಮಾತನಾಡಿ ವಿದ್ಯಾರ್ಥಿಗಳು ಜೀವನದಲ್ಲಿಗುರಿಯನ್ನುಹೊಂದಿ ನಿರಂತರ ಪ್ರಯತ್ನ ಪಟ್ಟರೆ ಮಾತ್ರ ಜೀವನದಲ್ಲಿ ಯಶಸ್ವಿ ವ್ಯಕ್ತಿಗಳಾಗಲು ಸಾದ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಮುನ್ಯಾಳ ಗ್ರಾಮ ಪಂಚಾಯತ ಸದಸ್ಯರಾದ ರಮೇಶ ಪಾಟೀಲ ಕಾಲೇಜಿನ ಪ್ರಾಚಾರ್ಯ ಎಸ್. ಸಿ. ಸತ್ತಿಗೇರಿ ಪದವಿ ಕಾಲೇಜಿನ ಪ್ರಾಚಾರ್ಯ ಎಸ್. ಬಿ. ಗೋಟೂರೆ ಐ.ಟಿ.ಐ. ಕಾಲೇಜಿನ ಪ್ರಾಚಾರ್ಯ ಚಿದಾನಂದ ಶೆಟ್ಟರ, ಉಪನ್ಯಾಸಕರಾದ ಎಸ್.ಎನ್. ಕುಂಬಾರ, ಆರ್. ಜೆ. ಕಟಗೇರಿ, ಎಸ್. ಬಿ. ಬೆಳವಿ ವೆಂಕಟೇಶ ಹೆಳವರ, ವಾಣಿಶ್ರೀ ಕಾಪಶೆ, ಸವಿತಾ ಪಡದಲ್ಲಿ, ವಿದ್ಯಾಶ್ರೀ ಜುಗುಳ, ಸಾಗರ ಕಳ್ಳಿಗುದ್ದಿ, ಚೇತನ ಹೊಸಟ್ಟಿ ಉಪಸ್ಥಿತರಿದ್ದರು.

ಎಂ.ಬಿ.ಸಿದ್ನಾಳಸೊಗಸಾಗಿನಿರೂಪಿಸಿದರು. ಎಸ್. ಬಿ. ಲಟ್ಟಿ ಸ್ವಾಗತಿಸಿದರು. ಜಿ. ಎಸ್. ಮನ್ನಾಪೂರ ವಂದಿಸಿದರು.

# ಬಾದಾಮಿಗೆ ಹೆಚ್ಚಿನ ರೈಲು ಸೌಲಭ್ಯಕ್ಕೆ ಒತ್ತಾಯ



**ಬಾದಾಮಿ :** ಐತಿಹಾಸಿಕ ಪ್ರವಾಸಿ ತಾಣವಾಗಿರುವ ಬಾದಾಮಿ ರೈಲ್ವೆ ಸ್ಟೇಷನ್‌ನಲ್ಲಿ ಹೆಚ್ಚಿನ ರೈಲು ಸೌಲಭ್ಯವನ್ನು ಒದಗಿಸಿ ಎಂದು ಬಾದಾಮಿ ಅಭಿವೃದ್ಧಿ ಹೋರಾಟ ಸಮಿತಿ ಸದಸ್ಯರು ಶನಿವಾರ ಸಂಸದ ಪಿ.ಸಿ.ಗದ್ದಿಗೌಡರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಪ್ರವಾಸಿ ಸ್ಥಳಗಳಾದ ಬಾದಾಮಿ, ಪಟ್ಟದಕಲ್ಲು, ಐಹೊಳೆ ಮತ್ತು ಧಾರ್ಮಿಕ ಪುಣ್ಯ ಕ್ಷೇತ್ರಗಳಾದ ಮಹಾಕೂಟ,ಬನಶಂಕರಿಮತ್ತುಶಿವಯೋಗಮಂದಿರ ಹೋಗಲು ಬಾದಾಮಿ ನಿಲ್ದಾಣಕ್ಕೆ ಪ್ರವಾಸಿಗರು ಬರುವರು. ಎಲ್ಲ ರೈಲುಗಳ ನಿಲುಗಡೆಯಾಗಿ ಪ್ರವಾಸಿಗರಿಗೆ ಸೌಲಭ್ಯ ದೊರೆಯಬೇಕು ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಯಶವಂತಪುರ-ಬಿಕೆನೇರ ರೈಲು ನಿಲ್ದಾಣದಲ್ಲಿ ನಿಲುಗಡೆ, ವಿಜಯಪುರ-ಯಶವಂತಪುರ, ಹೊಸಪೇಟೆ-ಮುಂಬಯಿ ರೈಲಿಗೆ ಹೆಚ್ಚುವರಿ ಬೋಗಿ ಅಳವಡಿಸುವುದು ಮತ್ತು ಹುಬ್ಬಳ್ಳಿ-ವಾರಣಾಸಿ ವಾರಕ್ಕೆ ಎರಡು ಸಲ ಸಂಚರಿಸಬೇಕು. ವಿಜಯಪುರ-ಬೆಂಗಳೂರಿಗೆ ' ವಂದೇ ಮಾತರಂ ' ರೈಲು ಆರಂಭಿಸಬೇಕು ಎಂದು ಆಗ್ರಹಿಸಿದರು.

ಬಾದಾಮಿ ಅಭಿವೃದ್ಧಿ ಹೋರಾಟ ಸಮಿತಿ ಕಾರ್ಯದರ್ಶಿ ಇಷ್ಟಲಿಂಗ ನರೇಗಲ್ ಮತ್ತು ಸದಸ್ಯರು ಇದ್ದರು.

# ದೋಷರಹಿತ, ನಿಷ್ಪಕ್ಷಪಾತ ಮತ್ತು ಪರಿಶುದ್ಧ ಮತದಾರರ ಪಟ್ಟಿ ತಯಾರಿಸಿ



**ರಬಕವಿ-ಬನಹಟ್ಟಿ :** ದೋಷರಹಿತವಾದ, ನಿಷ್ಪಕ್ಷಪಾತ ಮತ್ತು ಪರಿಶುದ್ಧವಾದ ಮತದಾರರ ಪಟ್ಟಿಯನ್ನು ತಯಾರು ಮಾಡುವಲ್ಲಿ ಬೂತ್ ಮಟ್ಟದ ಅಧಿಕಾ-ರಿಗಳ ಜವಾಬ್ದಾರಿ ಮತ್ತು ಕರ್ತವ್ಯಗಳು ಬಹಳಷ್ಟು ಮುಖ್ಯವಾಗಿವೆ ಎಂದು ತೇರದಾಳ ತಹಶೀಲ್ದಾರ್ ವಿಜಯಕುಮಾರ ಕಡಕೋಳ ತಿಳಿಸಿದರು.

ಅವರು ಬುಧವಾರ ಇಲ್ಲಿನ ಎಸ್. ಆರ್. ಎ. ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡ ಬೂತ್ ಮಟ್ಟದ ಅಧಿಕಾರಿಗಳ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬೂತ್ ಮಟ್ಟದ ಅಧಿಕಾರಿಗಳು ತರಬೇತುದಾರ-ರಿಂದ ಸೂಕ್ತವಾದ ಸಲಹೆ ಮತ್ತು ಮಾಹಿತಿಗಳನ್ನು ಪಡೆದುಕೊಂಡು ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಮತದಾರರನ್ನು ಗುರುತಿಸುವ ಕಾರ್ಯವನ್ನು ಮಾಡಬೇಕು. ಎಂದು ತಹಶೀಲ್ದಾರ್ ಕಡಕೋಳ ತಿಳಿಸಿದರು.

ಜಿಲ್ಲಾ ಸಂಪನ್ಮೂಲ ವ್ಯಕ್ತಿ ಎ. ಬಿ. ಡೇಂಗ್ರೆ ಮಾತನಾಡಿ ಅರ್ಹ ವ್ಯಕ್ತಿಗಳನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡುವುದರ ಜೊತೆಗೆ ಅನರ್ಹರಾದ ವ್ಯಕ್ತಿಗಳನ್ನು ಮತದಾರರ ಪಟ್ಟಿಯಿಂದ ಕೈ ಬಿಡಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಬೇಕು.

ಪ್ರಜಾಪ್ರಭುತ್ವ ಯಶಸ್ವಿಗೆ ಮತದಾನ ಅತ್ಯಂತ ಮಹತ್ವದ್ದಾಗಿದೆ. ಈ ದಿಶೆಯಲ್ಲಿ ಬೂತ್ ಮಟ್ಟದ ಅಧಿಕಾರಿಗಳ ಕಾರ್ಯ ಪ್ರಾಮಾಣಿಕತೆಯಿಂದ ಕೂಡಿರುತ್ತದೆ ಎಂದು ತಿಳಿಸಿದರು.

ತರಬೇತಿ ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳಾದ ಪ್ರಕಾಶ ಮಠಪತಿ, ಸದಾಶಿವ ಕುಂಬಾರ, ರವಿ ಹುಲ್ಲನ್ನವರ, ಮಂಜುನಾಥ ನೀಲನ್ನವರ, ತರಬೇತುದಾರರಾದ ಎಚ್. ವೈ. ಆಲಮೇಲ, ಶ್ರೀಶೈಲ ಹಲ್ಯಾಳ, ಎಂ. ಎಂ. ನಾಯಕವಾಡಿ, ಸುರೇಶ ಗಡಾಲೋಟಿ, ಎಫ್. ಬಿ. ತಳವಾರ ಸೇರಿದಂತೆ ಮತಕ್ಷೇತ್ರದ ಗ್ರಾಮ ಆಡಳಿತಾಧಿಕಾರಿಗಳು ಹಾಜರಿದ್ದರು.

# ಕೆ. ಎಚ್. ಡಿ. ಸಿ. ನೇಕಾರರಿಗೆ ಹಕ್ಕುಪತ್ರ ಮತ್ತು ನಿವೇಶನ ವಿತರಿಸಿ

## * ಫಲಾನುಭವಿಗಳ ಪಟ್ಟಿಯನ್ನು ತಯಾರಿಸಲು ಅಧಿಕಾರಿಗಳ ಹಿಂದೇಟು

**ರಬಕವಿ-ಬನಹಟ್ಟಿ :** ಕೆ.ಎಚ್. ಡಿ. ಸಿ. ನೇಕಾರ-ರಿಗೆ ಮತ್ತು ಕೂಲಿ ಕಾರ್ಮಿಕ ನೇಕಾರರಿಗೆ ಆದ-ಷ್ಟು ಬೇಗನೆ ನಿವೇಶನ ಮತ್ತು ಹಕ್ಕು ಪತ್ರಗಳನ್ನು ವಿತರಣೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ಅಧ್ಯಕ್ಷ ಶಿವಲಿಂಗ ಟಿರಕಿ ಆಗ್ರಹಿಸಿದರು.

ಅವರು ಬುಧವಾರ ರಬಕವಿ ಬನಹಟ್ಟಿ ತಹಶೀಲ್ದಾರ ಕಾರ್ಯಾಲಯದಲ್ಲಿ ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದವರು ನೇಕಾರರ ಬೇಡಿಕೆಗಳಿಗೆ ಆಗ್ರಹಿಸಿ ಶಿರಸ್ತೆದಾರ ರಾಜಶೇಖರ ಸಾತಿಹಾಳ ಅವ-ರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಹಕ್ಕು ಪತ್ರ ವಿತರಣೆ ಮತ್ತು ನಿವೇಶನ ಹಂಚಿಕೆ ಮಾಡುವ ದಿಶೆಯಲ್ಲಿ ನೇಕಾರರು 36 ದಿನಗಳ ಧರಣಿ, ಶಾಸಕರ ಮನೆಯ ಮುಂಭಾಗದಲ್ಲಿ ಧರಣಿ ಮತ್ತು ಬೆಂಗಳೂರಿನವರೆಗೆ ಪಾದಯಾತ್ರೆಯನ್ನು ಕೈಗೊಳ್ಳಲಾಗಿತ್ತು. ನಂತರ ವಿಷಯವನ್ನು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೂ ತರಲಾಗಿತ್ತು. ಆದರೆ ಇದುವರೆಗೂ ಯಾವುದೇ ಹಕ್ಕುಪತ್ರ ಮತ್ತು ನಿವೇಶನಗಳ ವಿತರಣೆಯಾಗಿಲ್ಲ.

ಈ ಹಿಂದೆ ಜವಳಿ ಸಚಿವರು ಕೆ.ಎಚ್.ಡಿ.ಸಿ.ನೇಕಾರರು ಧರಣಿ ನಡೆಸುತ್ತಿರುವ ಸ್ಥಳಕ್ಕೆ ಆಗಮಿಸಿ, ಆದಷ್ಟು ಬೇಗನೆ ಈ ನಿಟ್ಟಿನಲ್ಲಿ ಗಮನ ನೀಡಲಾಗುವುದು ಮತ್ತು ಹಕ್ಕುಪತ್ರಮತ್ತುನಿವೇಶನ ನೀಡುವುದಾಗಿ ತಿಳಿಸಿದ್ದರು. ಆದರೆ ಫಲಾನುಭವಿಗಳ ಪಟ್ಟಿಯನ್ನು ತಯಾರು ಮಾಡುವಲ್ಲಿ ಕೆ.ಎಚ್.ಡಿ.ಸಿ. ಅಧಿಕಾರಿಗಳು ಮಾತ್ರ ವಿಳಂಬ ನೀತಿಯನ್ನು ಅನುಸರಿಸುತ್ತಿದ್ದಾರೆ. ಆದ್ದ-ರಿಂದ ನಾವೇ ನಮ್ಮ ನೇಕಾರರ ಪಟ್ಟಿಯನ್ನು ತಯಾರು ಮಾಡಿ ತಮಗೆ ಸಲ್ಲಿಸುತ್ತಿದ್ದೇವೆ. ನಮಗೆ ಬೇಡಿಕೆಗೆ ಅನುಸಾರವಾಗಿ ಹಕ್ಕು ಪತ್ರ ಮತ್ತು ನಿವೇಶನಗಳನ್ನು ಹಂಚಿಕೆ ಮಾಡುವಲ್ಲಿ ಗಮನ ನೀಡಬೇಕು ಎಂದು ಶಿವಲಿಂಗ ಟಿರಕಿ ಆಗ್ರಹಿಸಿದರು.

ಈ ಸಂದರ್ಭದಲ್ಲಿ ರಾಜೇಂದ್ರ ಮಿರ್ಜಿ, ಮಹಾದೇವಿ ಚಿಂಚಖಂಡಿ,ಶೋಭಾ ಹಟ್ಟಿ,ಸುನಂದಾ ಗೋಂದಕರ, ಶಂಕ್ರೆವ್ವ ಆಲಕನೂರ, ಚಂದ್ರವ್ವ ಸವದಿ, ಜಯಶ್ರೀ ಗುಡಗುಂಟಿ, ಶಾಂತಾ ಮಾಲಗಾಂವಿ, ಶಶಿಕಲಾ ಬಕರೆ, ಗೀತಾ ಕಾವೇರಿ, ಅನಸುಯಾ ಭಸ್ಮೆ, ಕಸ್ತೂರಿ ಖಟಾವಕರ, ಶಾಂತಾ ಗಂಜಾಳ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಹೆಣ್ಣು ಮಕ್ಕಳಿಗೆ ಸಂಭ್ರಮ ತರುವ ಗುಳ್ಳವ್ವನ ಹಬ್ಬ

**ವರದಿ: ಇಲಾಹಿ ಇ. ಜಮಖಂಡಿ.**





**ಚಿಮ್ಮಡ :** ಮಣ್ಣೆತ್ತಿನ ಅಮವಾಸ್ಯೆ ಬಂತೆಂದರೆ ಹೆಣ್ಣು ಮಕ್ಕಳಿಗೆ ಸಂಭ್ರಮವೋ ಸಂಭ್ರಮ. ಅದಕ್ಕೆ ಕಾರಣ ಹೆಣ್ಣು ಮಕ್ಕಳ ವಿಶೇಷ ಹಬ್ಬ ಗುಳ್ಳವ್ವನ ಆಗಮನ.

ಪ್ರತಿ ವರ್ಷ ಮುಂಗಾರು ಮಳೆ ಆರಂಭದ ಒಂದುತಿಂಗಳನಂತರಬರುವಈಅಮವಾಸ್ಯೆ ಉತ್ತರ ಕರ್ನಾಟಕದಲ್ಲಿ ತನ್ನದೇಯಾದ ವೈಶಿಷ್ಟ್ಯತೆ ಪಡೆದು ಕೊಂಡಿದೆ. ಮುಂಗಾ-ರಿನ ಮೇಘರಾಜನ ದರ್ಶನದಿಂದ ಧರೆಯು ನವ ವಧುವಿನಂತೆ ಸಿಂಗಾರಗೊಂಡು ಎಲ್ಲೆಡೆ ಹಸಿರಿನಿಂದ ಕಂಗೊಳಿಸಿರುತ್ತಾಳೆ. ಸಕಲ ಜೀವ ಸಂಪತ್ತಿಗೆ ಆಸರೆಯಾಗಿರುವ ಪ್ರಕೃತಿಮಾತೆ ಆಷಾಢ ಮಾಸದಲ್ಲಿ ಜೇಡಿ ಮಣ್ಣಿನಿಂದ ತಯಾರಿಸಿದ ಗುಳ್ಳವ್ವನ ಪ್ರತಿರೂಪದಲ್ಲಿ ಪೂಜಿಸಲ್ಪಡುತ್ತಾಳೆ. ಈ ಭಾಗದಲ್ಲಿ ಅದರ ಪೂಜೆ ಹೆಣ್ಣು ಮಕ್ಕಳಲ್ಲಿ ಹಬ್ಬದ ವಾತಾವರಣವನ್ನೇ ಸೃಷ್ಟಿಸಿರುತ್ತದೆ.

ಮಣ್ಣೆತ್ತಿನ ಅಮವಾಸ್ಯೆ ನಂತರ ನಾಲ್ಕು ವಾರಗಳವರೆಗೆ ಪ್ರತಿ ಮಂಗಳವಾರ ಬೆಳಿಗ್ಗೆ ಮಹಿಳೆಯರು ಕುಂಬಾರ ಓಣಿಗೆ ಹೋಗಿ ಅಲ್ಲಿ ತಯಾರಿಸಿದ ಹಲವು ಆಕಾರಗಳ ಗುಳ್ಳವ್ವನ ಕಲಾಕೃತಿಗಳಲ್ಲಿ ತಮಗೆ ಬೇಕಾದ ಒಂದನ್ನು ಆರಿಸಿ ಕಟ್ಟಿಗೆಯ ಮಣೆಯ ಮೇಲೆ ಕುಳ್ಳಿರಿಸಿ ಸಂಭ್ರಮದೊಂದಿಗೆ ಮನೆಗೆ ತರುತ್ತಾರೆ. ನಂತರ ಮನೆಯಲ್ಲಿ ಗುಳ್ಳವ್ವಳಿಗೆ ಬಾಗಿಲು ಕೊರೆದು ನವಿಲು ಆಕಾರ ಮಾಡಿ ಅದನ್ನು ಬಾಗಿಲಲ್ಲಿ ಕೂಡ್ರಿಸುತ್ತಾರೆ. ಗುಲಗಂಜಿ ಹಾಗೂ ಹಲವು ಬಣ್ಣಗಳಿಂದ ತಯಾರಿಸಿದ ಕುಸುಬಿ, ಕುಂಕುಮ, ಹಾಗೂ ವಿವಿಧ ಅಲಂಕಾರಿಕ ಸಾಮಗ್ರಿಗಳಿಂದ ಅದನ್ನು ಶೃಂಗರಿಸುತ್ತಾರೆ. ಸಂಜೆಯಾಗುತಿ-ದ್ದಂತೆಯೇ ಹೆಣ್ಣು ಮಕ್ಕಳು ಗುಂಪು ಗುಂಪಾಗಿ ಮನೆ ಮನೆಗೆ ತೆರಳಿ ಗುಳ್ಳವ್ವನ ಪದ ಹಾಡುತ್ತಾ ಆರತಿ ಬೆಳಗುತ್ತಾರೆ. ಮರುದಿನ ವಿಶೇಷ ಬಗೆಯ ಅಡುಗೆ ತಯಾರಿಸಿ ಸಿಹಿ ಪದಾರ್ಥಗಳೊಂದಿಗೆ ಪ್ರಕೃತಿ ಸೌಂದರ್ಯ ಆಸ್ವಾದಿಸಲು ಮನೆ ಮಂದಿಯೆಲ್ಲ ಸೇರಿ ವಿಶೇಷ ಸ್ಥಳಗಳಿಗೆ ತೆರಳುತ್ತಾರೆ. ಕೆಲವರು ಕುಟುಂಬ ಸಮೇತ ಒಂದೆರಡು ದಿನ ಪ್ರವಾಸಕ್ಕೆ ತೆರಳುವುದೂ ಉಂಟು. ಆಷಾಢ ಮಾಸ ಮುಗಿಯುವವರೆಗೂ ಇದು ಪ್ರತಿ ಮಂಗಳವಾರ ನಡೆಯುವ ಸಂಭ್ರಮದ ಹಬ್ಬ. ಇದಕ್ಕೆ ಜಾತಿ ಮತಗಳ ಭೇದವಿಲ್ಲದೆ ಪ್ರತಿಯೊಬ್ಬರ ಮನೆಯಲ್ಲಿ ನಡೆಯುವ ಜಾತ್ರೆಯೆಂದೇ ಹೇಳಬಹುದು.

ತಯಾರಿಕೆಯಲ್ಲಿ ಆಧುನಿಕತೆ; ಈ ಹಿಂದೆ ಬಂಡೆಗಾಲಿಯಂತಹ ದೊಡ್ಡ ಗಾಲಿಯನ್ನು ಕೈಯಿಂದ ಇಬ್ಬರು ತಿರುಗಿಸಿ ಮತ್ತೊಬ್ಬರು ಜೇಡಿಮಣ್ಣನ್ನು ಹದಗೊಳಿಸಿ ಗಾಲಿ ನಡುವೆ ಹಸಿ ಮಣ್ಣನ್ನು ಇಟ್ಟು ಗುಳ್ಳವ್ವನನ್ನು ತಯಾ-ರಿಸಲಾಗುತಿತ್ತು.

ಈ ತಯಾರಿಕೆಗೆ ಈಗ ಆಧುನಿಕ ಸ್ಪರ್ಶ ನೀಡಿರುವುದರಿಂದ ವಿದ್ಯುತ್ ಮೋಟಾರು ಅಳವಡಿಸಿ ಸುಲಭ ವಿಧಾನದಲ್ಲಿ ತಯಾ-ರಿಸಲಾಗುತ್ತದೆ.

ಮಣ್ಣಿನ ಕೊರತೆ: ಈ ಹಿಂದೆ ಹೇರಳವಾಗಿ ದೊರೆಯುತ್ತಿದ್ದ ಜೇಡಿ ಮಣ್ಣಿಗೆ ಈಗ ಅಭಾವ ಉಂಟಾಗಿ ಅದನ್ನು ಸಂಗ್ರಹಿಸಲು ಎಲ್ಲೆಡೆ ಪರದಾಡುವಂತಾಗಿದೆ ಎಂದು ತಿಪ್ಪಣ್ಣಪ್ಪ ಕುಂಬಾರ ಹೇಳುತ್ತಾರೆ. ಮೊದಲು ಉಚಿತವಾಗಿಯೆ ಗ್ರಾಮದಲ್ಲಿಯೇ ದೊರೆಯುತ್ತಿದ್ದ ಈ ಮಣ್ಣಿನ ಬಳಕೆಯಿಂದ ಭೂಮಿಯ ಫಲವತ್ತತೆಗೆ ಧಕ್ಕೆಯುಂಟಾಗುತ್ತಿದ್ದರಿಂದ ರೈತರು ಮಣ್ಣು ಕೊಡಲು ಹಿಂದೇಟು ಹಾಕುತಿದ್ದಾರೆ. ಇದರಿಂದಾಗಿ ನದಿ ತೀರದ ಗ್ರಾಮಗಳಿಗೆ ಹೋಗಿ ಮಣ್ಣನ್ನು ತರಬೇಕಾಗಿದೆ. ನೆರೆಯ ಪಟ್ಟಣಗಳಿಗೂ ಮಣ್ಣಿನ ಗುಳ್ಳವ್ವ ಹಾಗೂ ಮಣ್ಣೆತ್ತುಗಳನ್ನು ನಾವೇ ತಯಾರಿಸಿ ಕೊಡಬೇಕಾಗಿರುವುದರಿಂದ ಪ್ರತಿಸಾರಿ ಮಣ್ಣಿಗಾಗಿಅಲೆದಾಡಬೇಕಾಗಿದೆಎನ್ನುತ್ತಾರೆ.

ಕಳೆಗುಂದುತ್ತಿರುವ ಹಬ್ಬ; ಆಧುನಿಕತೆಯ ಭರಾಟೆಯಲ್ಲಿ ಭಾರತೀಯ ಸಾಂಪ್ರದಾಯಿಕ ಹಬ್ಬಗಳು ಕಳೆಗುಂದುತ್ತಿದ್ದು, ನವ ಪೀಳಿಗೆ ಇಂತಹ ಹಬ್ಬಗಳಿಂದ ದೂರ ಉಳಿಯುತ್ತಿರುವುದು ನಮ್ಮ ಸಂಸ್ಕೃತಿಗೆ ಬಿದ್ದ ಬಲವಾದ ಪೆಟ್ಟು ಎನ್ನಬಹುದು. ಈ ಮೊದಲು ಇಂತಹ ಅನೇಕ ಹಬ್ಬಗಳಿಗಾಗಿ ಗ್ರಾಮೀಣ ಭಾಗದ ಜನ ಕಾಯುತಿದ್ದರು. ಗುಳ್ಳವ್ವನನ್ನು ಖರೀದಿಸಲು ಕುಂಬಾರ ಓಣಿಗೆ ಹೋಗಿ ತರುತ್ತಿದ್ದರು.

ಆದರೆ ಈಗ ಮನೆ ಮನೆಗಳಿಗೆ ಒಯ್ದು ಮಾರಾಟ ಮಾಡುವ ಸ್ಥಿತಿ ಇದ್ದು ಕುಂಬಾ-ರಿಕೆಗೆ ಗೌರವವಿಲ್ಲದಂತಾಗಿದೆ ಎಂದು ದು:ಖದಿಂದ ಹೇಳುತ್ತಾರೆ ಗುಳ್ಳವ್ವ ತಯಾರಕ ಪರಪ್ಪ ಕುಂಬಾರ.


ಗ್ರಾಮೀಣ ಬಾಗಗಳಲ್ಲಿ ಇಂತಹ ಹಬ್ಬಗಳಿಗೆ ಇನ್ನೂ ಸ್ವಲ್ಪ ಮಟ್ಟದಲ್ಲಿ ಪ್ರಾಮುಖ್ಯತೆ ಇದೆ. ಆದರೆ ನಗರ ಪ್ರದೇಶಗಳಲ್ಲಿ ಈ ಆಚರಣೆಗಳು ನಶಿಸಿ ಹೋಗುತ್ತಿರುವುದು ದುರದೃಷ್ಟಕರ.

# ಲಯನ್ಸ್ ಕ್ಲಬ್ ಪದಾಧಿಕಾರಿಗಳ ಪದವಿ ಪ್ರಧಾನ ಸಮಾರಂಭ

**ಮಹಾಲಿಂಗಪುರ :** ಮಾನವ ಜನಾಂಗದ ಅವಶ್ಯಕತೆಗಳನ್ನುಪೂರೈಸುತ್ತಾಸಾರ್ವಜನಿಕ ಸೇವೆಯಲ್ಲಿಯೇ ಸಂತೋಷ ಕಾಣುವದು ಲಯನ್ಸ ಸಂಸ್ಥೆಯ ಉದ್ದೇಶವಾಗಿದೆ ಎಂದು ಲಯನ್ಸ್ ಕ್ಲಬ್ ಅಂತರರಾಷ್ಟ್ರೀಯ ಮಾನ್ಯತೆ ಪಡೆದ ಬೋಧಕರಾದ ಮೋನಿಕಾ ಸಾವಂತ ಹೇಳಿದರು.

ಪಟ್ಟಣದ ವೈದ್ಯರ ಸಭಾ ಭವನದಲ್ಲಿ ಜರುಗಿದ ಲಯನ್ಸ್ ಸಂಸ್ಥೆಯ 2025-26 ನೇ ಸಾಲಿನ ಸೇವಾವಧಿಗೆ ಪದಾಧಿಕಾರಿಗಳ ಪದವಿ ಪ್ರದಾನ ಸಮಾರಂಭದಲ್ಲಿ ಪದವಿ ಗ್ರಹಣ ಅಧಿಕಾರಿಯಾಗಿ ಭಾಗಿಯಾಗಿ ಮಾತನಾಡಿದ ಅವರು, ವಿಶ್ವದಾದ್ಯಂತ ಸುಮಾರು ನಾಲ್ವತ್ತು ಲಕ್ಷ ಸದಸ್ಯರನ್ನು ಲಯನ್ಸ್ ಕ್ಲಬ್ ಹೊಂದಿದೆ. ಮಾನವೀಯ ಮೌಲ್ಯಗಳಿಗಾಗಿ ಶ್ರಮಿಸಿರಿ.

ನೀರಿನಿಂದ ಸ್ನಾನ ಮಾಡಿದರೆ ದೇಹ ಸ್ವಚ್ಛವಾಗಬಹುದು. ಆದರೆ ಬೆವ-ರಿನಿಂದ ಸ್ನಾನ ಮಾಡಿದರೆ ಇತಿಹಾಸ




ಬದಲಿಸಬಹುದು ಎಂದರು.

ಲಯನ್ಸ್ ಕ್ಲಬ್ ನೂತನ ಅಧ್ಯಕ್ಷರಾಗಿ ನ್ಯಾಯವಾದಿ ಸಿದ್ದು ನಕಾತಿ, ಖಜಾಂಚಿಯಾಗಿ ಪ್ರಶಾಂತ ಅಂಗಡಿ, ಕಾರ್ಯದರ್ಶಿಯಾಗಿ ಡಾ. ವಿದ್ಯಾ ದಿನ್ನಿಮನಿ, ನಿಕಟಪೂರ್ವ ಅಧ್ಯಕ್ಷ ರಾಜು ತಾಳಿಕೋಟಿ, ಡಾ. ಸಂತೋಷ ಪೂಜೇರಿ, ಡಾ. ರಮೇಶ ಶೆಟ್ಟರ ಮಾತನಾಡಿದರು.

ಇಂಜಿನಿಯರ ಸುನೀಲ ಕಡಪಟ್ಟಿ ಅತಿಥಿ-ಯಾಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಸಾಧಕರಾದ ತಾಲೂಕು ಪಂಚಾಯತ್ ಇ. ಓ. ಉಮೇಶ ಸಿದ್ನಾಳ, ಸಮಾಜ ಸೇವಕ ಚನಬಸು ಹುರಕಡ್ಲಿ, ಪ್ರಭು ಘಟ್ಟೆಪ್ಪನವರ, ಕೀರ್ತಿ ತಿರಕಣ್ಣವರ ಅವರನ್ನು ಸನ್ಮಾನಿಸಲಾಯಿತು. ಈರ್ವರು ಬಡ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರ ವಿತರಿಸಲಾಯಿತು. ಸುಮಾರು ನೂರು ಸಸಿಗಳನ್ನು ನೆಡಲಾಯಿತು.

ಕ್ಲಬ್ನ ನಿಕಟಪೂರ್ವ ಕಾರ್ಯದರ್ಶಿ ಡಾ. ಉಮಾ ಗುಂಡಾ, ಖಜಾಂಚಿ ಸಂಜು ಶಿರೋಳ, ನೂತನ ಪದಾಧಿಕಾರಿಗಳಾದ ಅಶ್ವಿನಿ ಕೋಳಿಗುಡ್ಡ, ಪ್ರಕಾಶ ತಾಳಿಕೋಟಿ, ಸಂದೀಪ ಚಿಕ್ಕೋರ್ಡೆ, ಹುಚ್ಚೇಶ ವಡ್ಡರ, ಡಾ. ಶಕುಂತಲಾ ಸಂಶಿ, ಶ್ರೀಶೈಲ ಕಾರಜೋಳ, ಡಾ. ಜಬ್ಬಾರ್ ಯಕ್ಸಂಬಿ, ಡಾ. ಅನುಪ ಹಂಚಿನಾಳ, ಡಾ. ಸುರೇಖಾ ಚನ್ನಾಳ ನಿರ್ದೇಶಕರಾದ ಡಾ. ವಿಶ್ವನಾಥ ಗುಂಡಾ, ಸೋಮಶೇಖರ ಸಂಶಿ, ಡಾ. ಅಶೋಕ ದಿನ್ನಿಮನಿ, ಡಾ. ಎಂ. ಎಸ್. ಚನ್ನಾಳ, ಸಂಜಯ ಅಂಬಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು. ಡಾ. ಎಂ. ಎಂ. ಮೇದಾರ ಸೊಗಸಾಗಿ ನಿರೂಪಿಸಿದರು.

# ವ್ಯಕ್ತಿಯ ಸೌಂದರ್ಯ ಹೆಚ್ಚಳಕ್ಕೆ ಪ್ಲಾಸ್ಟಿಕ್ ಸರ್ಜರಿ ವರದಾನ




**ವಿಜಯಪುರ** : ಗಾಯಗಳು, ದೋಷಗಳು, ಶಸ್ತ್ರಚಿಕಿತ್ಸೆಯಿಂದಾಗುವ ಕಲೆಗಳನ್ನು ಸರಿಪಡಿಸಲು ಮತ್ತು ವ್ಯಕ್ತಿಯ ಸೌಂದರ್ಯವನ್ನು ಹೆಚ್ಚಿಸಲು ಪ್ಲಾಸ್ಟಿಕ್ ಸರ್ಜರಿ ವರದಾನವಾಗಿದೆ ಎಂದು ಬಿ.ಎಲ್.ಡಿ.ಇ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ ಹೇಳಿದ್ದಾರೆ.

ಮಂಗಳವಾರ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ.ಎಂ.ಪಾಟೀಲ ಸೂಪರ್ ಸ್ಪೇಷಾಲಿಟಿ ಆಶ್ಪತ್ರೆಯಲ್ಲಿ ನಡೆದ ವಿಶ್ವ ಪ್ಲಾಸ್ಟಿಕ್ ಸರ್ಜರಿ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಈ ಹಿಂದೆ ಮನುಷ್ಯನ ಮುಖಚರ್ಯೆ, ಅಂಗವೀಕಲತೆ ಸೇರಿದಂತೆ ನಾನಾ ವಿಕಲತೆಗಳನ್ನು ಸರಿಪಡಿಸುವುದು ಕಷ್ಟಸಾಧ್ಯವಾಗಿತ್ತು. ಆದರೆ ಇಂದು ವೈದ್ಯಕೀಯ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿಯಿಂದಾಗಿ ಪ್ಲಾಸ್ಟಿಕ್ ಸರ್ಜರಿ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಯಾಗಿದೆ. ಅಪಘಾತ, ಸುಟ್ಟಗಾಯ, ಶೀಳುತುಟಿ, ಜನ್ಮದೋಷ, ಅಂಗವೈಕಲ್ಯ, ಹೆಚ್ಚವರಿ ಬೆರಳುಗಳನ್ನು ಸರಿಪಡಿಸುವುದು. ದೇಹ ಮತ್ತು ಮುಖದ ಆಕಾರವನ್ನು ಬದಲಿಸುವುದು, ಸುಕ್ಕುಗಳನ್ನು ಕಡಿಮೆ ಮಾಡಿ ಚರ್ಮದ ಕಾಂತಿ ಹೆಚ್ಚಿಸುವುದು ಈಗ ಸರಳವಾಗಿದೆ. ವಿಕಾರ ರೂಪವನ್ನು ಸುಂದರವಾಗಿ ಮಾರ್ಪಡಿಸಬಹುದಾಗಿದೆ. ಅಲ್ಲದೆ ಪ್ಲಾಸ್ಟಿಕ್ ಸರ್ಜರಿ ಈಗ ಅತೀ ವೇಗವಾಗಿ ಮುನ್ನುಗ್ಗುತ್ತಿದೆ ಎಂದು ಅವರು ಹೇಳಿದರು.

ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ ಮಾತನಾಡಿ ಶ್ರೀ ಬಿ.ಎಂ.ಪಾಟೀಲ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆ ಬಡವರ ಪಾಲಿಗೆ ಸಂಜೀವಿನಿಯಾಗಿದೆ. ಕೈಗೆಟಕುವ ದರದಲ್ಲಿ ಚಿಕಿತ್ಸೆ ನೀಡುವ ಮೂಲಕ ಸಾರ್ವಜನಿಕರಿಗೆ ನೇರವಾಗುತ್ತಿದೆ. ಇಲ್ಲಿನ ತಜ್ಞವೈದ್ಯ ಡಾ. ವಿಜಯಕುಮಾರ ಹುಡೇದ ಕಳೆದ ಮೂರು ವರ್ಷಗಳಲ್ಲಿ 1555 ಕ್ಕೂ ಹೆಚ್ಚು ಪ್ಲಾಸ್ಟಿಕ್ ಸರ್ಜ–ರಿಗಳನ್ನು ಮಾಡುವ ಮೂಲಕ ರೋಗಿಗಳ ಮುಖದಲ್ಲಿ ಮಂದಹಾಸ ಮೂಡಿಸಿದ್ದಾರೆ ಎಂದು ಹೇಳಿದರು.

ಪ್ಲಾಸ್ಟಿಕ್ ಸರ್ಜನ ಡಾ. ವಿಜಯಕುಮಾರ ಹುಡೇದ ಮಾತನಾಡಿ, ಪ್ಲಾಸ್ಟಿಕ್ ಸರ್ಜರಿ ದುಬಾರಿ ಎಂಬ ತಪ್ಪು ಗ್ರಹಿಕೆಯಿಂದ ಎಲ್ಲರೂ ಹೊರ ಬರಬೇಕಿದೆ. ಮಹಾನಗರಗಳಿಗೆ ಹೋಲಿಸಿದರೆ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ವೆಚ್ಚ ಕಡಿಮೆ ಇದೆ. ನಮ್ಮಲ್ಲಿ ಸರಾಸರಿ ಪ್ರತಿದಿನ ಎರಡರಂತೆ ಪ್ಲಾಸ್ಟಿಕ್ ಸರ್ಜರಿಗಳು ನಡೆಯುತ್ತಿವೆ. ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆ ವಿಭಾಗದ ಪ್ರಾಧ್ಯಾಪಕ ಡಾ. ಮಂಜುನಾಥ ಕೋಟೆಣ್ಣವರ, ಪ್ಲಾಸ್ಟಿಕ್ ಸರ್ಜನ ಡಾ. ಅನಿಕೇತ ವಲ್ಲಭ, ಹೃದ್ರೋಗ ತಜ್ಞ ಡಾ. ಸಂಜೀವ ಸಜ್ಜನರ, ಮೂತ್ರಪಿಂಡ ವಿಭಾಗದ ಡಾ. ಸಂದೀಪ ಪಾಟೀಲ, ಆಸ್ಪತ್ರೆಯ ಸಹಆಡಳಿತಾಧಿಕಾರಿ ಶಾಂತೇಶ ಸಲಗರ ಮುಂತಾದವರು ಉಪಸ್ಥಿತರಿದ್ದರು.

# ನೂತನ ಜಿಲ್ಲಾಧಿಕಾರಿಗೆ ಸನ್ಮಾನ




**ವಿಜಯಪುರ** : ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಜಿಲ್ಲಾ ಘಟಕ ವಿಜಯಪುರ ಹಾಗೂ ತಾಲೂಕ್ ಅನುದಾನಿತ ಪ್ರಾಥ–ಮಿಕ ಶಾಲಾ ಶಿಕ್ಷಕರ ಸಂಘ ವಿಜಯಪುರ ಇವರ ಸಹಯೋಗದೊಂದಿಗೆ ನೂತನ ಜಿಲ್ಲಾಧಿಕಾರಿಗಳಿಗೆ ಆತ್ಮೀಯವಾಗಿ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶಿವಾನಂದ ಹಿರೇಕುರಬರ ಪ್ರಧಾನ ಕಾರ್ಯದರ್ಶಿಗಳಾದ ಗಿರೀಶ್ ಬಿರಾದಾರ್ ತಾಲೂಕಾಧ್ಯಕ್ಷರಾದ ಆನಂದ್ ಕುಲಕರ್ಣಿ. ಮಹಾಮಂಡಲದ ವಿಜಯಪುರನಗರವಲಯದಅದ್ಯಕ್ಷರಾದ ಎಚ್ ಜಿ ತೋನಶ್ಯಾಳ ಪ್ರಧಾನ ಕಾರ್ಯದರ್ಶಿಯಾದ ಬಿ ಎನ್ ಕಾಳಿ. ಉಪಾಧ್ಯಕ್ಷರಾದ ಮಾಂತೇಶ್ ಜತ್ತಿ. ಖಜಾಂಚಿಗಳಾದ ಸಂಜು ಮಲಾರಿ. ರಾಜ್ಯಸಂಘಟನಾ ಕಾರ್ಯದರ್ಶಿಗಳಾದ. ವಿಜಯಕುಮಾರ ವಪ್ಪಾರಿ. ಹಾಗೂ ಗಿರೀಶ್ ಕುಲಕರ್ಣಿ ಜಿಲ್ಲಾ ಉಪಾಧ್ಯಕ್ಷರಾದ ಸುರೇಶಗೌಡ ಬಿರಾದಾರ ಜಿಲ್ಲಾ ಖಜಾಂಚಿ ಎಸ್ ಎಸ್ ಗಣಿ ಜಿಲ್ಲಾ ಸಹ ಕಾರ್ಯದರ್ಶಿ ಎಚ್ ಎ ಕುಂದರಗಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳೊಂದಿಗೆ ಶಿಕ್ಷಕರ ಅನೇಕ ಸಮಸ್ಯೆಗಳನ್ನು ಚರ್ಚಿಸಲಾಯಿತು. ಜಿಲ್ಲಾಧಿಕಾರಿಗಳು ಸಮಸ್ಯೆಗಳಿಗೆ ಸ್ಪಂದಿಸಿದರು.

# ನಂಜನಗೂಡು ಮಠದಲ್ಲಿ ಜಯತೀರ್ಥರ ಆರಾಧನೆ: ರಥೋತ್ಸವ ವಿಶೇಷ ಪೂಜೆ



**ವಿಜಯಪುರ:** ಇಲ್ಲಿಯ ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಇಂದು ಶ್ರೀ ಜಯತೀರ್ಥರ ಆರಾ ಧನೆಯನ್ನು ಅತ್ಯಂತ ಭಕ್ತಿ ಪುರಸ್ಸರವಾಗಿ ಆಚ–ರಿಸಲಾಯಿತು.

ತನ್ನಿಮಿತ್ತ ಬೆಳಿಗ್ಗೆ ಗುರುಸಾರ್ವಭೌಮರ ಅಷ್ಟೋತ್ತರ, ಸುಧಾ ಪಾರಾಯಣ, ಬಳಿಕ ವೃಂದಾವನಕ್ಕೆ ಫಲ ಪಂಚಾ ಮೃತ, ಅಲಂಕಾರ, ಮಹಾಪೂಜೆ ಜರುಗಿದವು.

ಶ್ರೀ ಜಯತೀರ್ಥರ ಭಾವಚಿತ್ರಕ್ಕೆ ಹೂಮಾಲೆಗಳಿಂದ ಅಲಂಕರಿಸಿ ಶ್ರದ್ಧಾಭಕ್ತಿಯಿಂದ ನಮಿಸಲಾಯಿತು. ಆನಂತರ ಶ್ರೀ ಮಠದ ಒಳಾವರಣದಲ್ಲಿ ಟೀಕಾರಾಯರ ರಚಿಸಿದ ಗ್ರಂಥಗಳನ್ನು ಹಾಗೂ ಭಾವಚಿತ್ರ ಪುಷ್ಪಗಳನ್ನಿಟ್ಟ ಅಲಂಕೃತ ರಥೋತ್ಸವ ಜರುಗಿತು. ರಥ–ೋತ್ಸವ ಸಮಯದಲ್ಲಿ ದೇವರ ನಾಮಗಳ ಸುಮಧುರ ಕಂಠದ ಹಾಡುಗಳು ಭಕ್ತರ ಭಕ್ತಿಯ ಪರಾಕಾಷ್ಠೆ ಮಠದ ಆವರಣದಲ್ಲಿ ಮಾರ್ದನಿಗೊಂಡವು.

ಯುವ ಪಂಡಿತ ಡಾ. ಕೃಷ್ಣಾ ಚಾರ್ಯ ಕಾಖಂಡಕಿ ಪ್ರವಚನ ನೀಡುತ್ತ ಜಯತೀರ್ಥ ಗುರುವರ್ಯರು ಮಾಧ್ವ ಸಾಹಿತ್ಯ ಪ್ರಪಂಚಕ್ಕೆ ಸೂರ್ಯನಂತೆ ಪ್ರಕಾಶಮಾನರಾಗಿ ಹೊಳೆಯುತ್ತಿರುವರು ಎಂದರಲ್ಲದೇ ಅವರ ನುಡಿಗಳು ನಮಗೆ ಕಾಮಧೇನು ಇದ್ದಂತೆ ಎಂದರು.

ಸನಾನತ ಹಿಂದು ಪರಂಪರೆಯ ಯತಿಶ್ರೇಷ್ಠರಲ್ಲಿ ಓರ್ವರು ಇವರಾಗಿದ್ದರು, ಅವರು ರಚಿಸಿದ ಗ್ರಂಥಗಳನ್ನು ಅರಿತುಕೊಳ್ಳುವ ಪ್ರಯತ್ನ ಮಾಡಬೇಕಿದೆ ಎಂದರು. ಜ್ಞಾನಭಕ್ತಿ ವೈರಾಗ್ಯವನ್ನು ಹೆಚ್ಚಿಸುವ ಮಾಸ ಆಷಾಢವಾಗಿದೆ ಎಂದರು.

ಬೆಳಿಗ್ಗೆಯಿಂದಲೇ ಅಸಂಖ್ಯ ಸಂಖ್ಯೆಯಲ್ಲಿ ಭಕ್ತರು ಶ್ರೀಮಠಕ್ಕೆ ಆಗಮಿಸಿ ವೃಂದಾವನದ ದರ್ಶನ ಪಡೆದು ಪುನೀತ ರಾದರು. ವೃಂದಾವನವನ್ನು ಮಠದ ಅರ್ಚಕ ರವಿ ಆಚಾರ್ಯ ಹಾಗೂ ಶ್ರೀಧರಾಚಾರ್ಯ ವಿವಿಧಬಗೆಯ ಪುಷ್ಪಗಳಿಂದ ಸುಂದರವಾಗಿ ಅಲಂಕರಿಸಿದ್ದು ಗಮನ ಸೆಳೆಯಿತು.

ಶ್ರೀಮಠದ ವಿಚಾರಣಾಕರ್ತಾ ಗೋಪಾಲ ನಾಯಕ, ವಾಮನರಾವ ದೇಶಪಾಂಡೆ, ಕೆ ಜಿ ದೇಶಪಾಂಡೆ, ಕೃಷ್ಣ ಪಡಗಾನೂರ, ದಾಮೋದರಾಚಾರ್ಯ, ಬಂಡಾಚಾರ್ಯ ಜೋಶಿ( ಕೂಡಗಿ), ಪ್ರಕಾಶ ಬಿಜಾಪುರ, ವಿಜಯೀಂದ್ರ ಡಿ ಜೋಶಿ, ಬಿ ಜಿ ಜೋಶಿ, ಡಾ. ಪವಮಾನ ಜೋಶಿ, ಪ್ರಾಣೇಶ ಪಾಟೀಲ, ಡಿ ಆರ್ ನಾಡಿಗ, ಭೀಮಣ್ಣ ಕುಲಕರ್ಣಿ, ಸಂತೋಷ ಕುಲಕರ್ಣಿ( ಸತ್ತಿ) ಮುಂತಾದವರು ಉಪ ಸ್ಥಿತರಿದ್ದರು.

# ಸನ್ಮಾನಗಳು ವಿಧ್ಯಾರ್ಥಿಗಳಿಗೆ ಪ್ರೇರಣೆ: ಹಾಸಿಂಪೀರ ವಾಲೀಕಾರ




**ವಿಜಯಪುರ** : ಸನ್ಮಾನಗಳು ವಿದ್ಯಾರ್ಥಿಗಳಿಗೆ ಪ್ರೇರಣೆ . ವಿದ್ಯಾರ್ಥಿಗಳ ಕಲಿಕೆಗೆ ಅತ್ಯಂತ ಪ್ರೋತ್ಸಾಹದಾಯಕವಾಗಿದೆ ವಿಜಯಪುರ ಜಿಲ್ಲೆಯಲ್ಲಿ ಎಸ್ ಎಸ ಎಲ್ ಸಿ ಪರೀಕ್ಷೆಯ ಕನ್ನಡ ಮಾಧ್ಯಮದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿಧ್ಯಾರ್ಥಿಗಳಿಗೆ ಸನ್ಮಾನ ಹಾಗು ಬಹುಮಾನ ವಿತರಣೆ ಮಾಡಿದ್ದು ಅತ್ಯಂತ ಸ್ತುತಾರ್ಹ ಕಾರ್ಯವೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಅಭಿಪ್ರಾಯ ವ್ಯಕ್ತಪಡಿಸಿದರು

ಇಂದು ಮಂಗಳವಾರ ಸರಕಾರಿ ಪ್ರೌಢ ಶಾಲೆ ಜಂಬಗಿ ಶಾಲೆಯ ಆವರಣದಲ್ಲಿ ಮೈಕೊ ಕನ್ನಡ ಬಳಗ ಬಿಡದಿ ಹಾಗು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವಿಜಯಪುರ ಆಶ್ರಯದಲ್ಲಿ ಜರುಗಿದ ಕನ್ನಡ ಮಾಧ್ಯಮದಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಹೆಚ್ಚುಅಂಕಪಡೆದವಿದ್ಯಾರ್ಥಿಗಳಿಗೆ ಸನ್ಮಾನ ಹಾಗು ಬಹುಮಾನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ 600 ನೂರು ಕೀಲೋಮೀಟರ ದೂರದಿಂದ ವಿಜಯಪುರ ಜಿಲ್ಲೆಗೆ ಆಗಮಿಸಿ ಜಿಲ್ಲೆಯಲ್ಲಿ ಕನ್ನಡ ಮಾಧ್ಯಮದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಿಡದಿ ಕನ್ನಡ ಬಳಗ ಈ ವರ್ಷ ವಿಜಯಪುರ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಗಡಿ ಭಾಗದ ಜಿಲ್ಲೆಗಳಿಗೆ ಪ್ರೋತ್ಸಾಹ ನೀಡುತ್ತಿರುವದು ಸಂತೋಷದ ಸಂಗತಿ ಎಂದರು .

ಸರಕಾರಿ ಪ್ರೌಢ ಶಾಲೆ ಜಂಬಗಿ ಮುಖ್ಯ ಅಧ್ಯಾಪಕಿ ರೇಣುಕಾ ಕೊಣ್ಣೂರ ಮಾತನಾಡಿ ವಿಜಯಪುರ ಜಿಲ್ಲೆಯ ಸರಕಾರಿ ಪ್ರೌಢ ಶಾಲೆಗಳು ಹಾಗು ವಿವಿಧ ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳು ಪ್ರತಿ ವರ್ಷ ಉತ್ತಮ ಫಲಿತಾಂಶ ಪಡೆದು ಜಿಲ್ಲೆಯ ಗೌರವ ತರುತ್ತಿದ್ದಾರೆ ಜಂಬಗಿ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ ಅನ್ನಪೂರ್ಣ ದೇಶಮುಖ ಮಾತೃ ಭಾಷೆ ಕನ್ನಡದಲ್ಲಿ ಪರೀಕ್ಷೆ ಬರೆದು ಜಿಲ್ಲೆಗೆ ಪ್ರಥಮ ಬಂದಿರುವದು ಅತ್ಯಂತ ಸಂತೋಷದ ಸಂಗತಿ ಎಂದರು.

ಬಿಡದಿ ಕನ್ನಡ ಬಳಗ ಪ್ರತಿ ವರ್ಷ ಒಂದು ಜಿಲ್ಲೆ ಆಯ್ಕೆ ಮಾಡಿಕೊಂಡು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಕಳೆದ ಮೂವತ್ತೈದು ವರ್ಷಗಳಿಂದ ಸೇವೆ ಮಾಡುತ್ತಾ ಬಂದಿದ್ದೇವೆ.ಮೈಕೊ ಕಂಪನಿರ ಉದ್ಯೋಗಿಗಳು ಕನ್ನಡ ಬಳಗ ಕಟ್ಟಿಕೊಂಡು ಸೇವೆ ಮಾಡಿದ ತೃಪ್ತಿ ನಮಗಿದೆ ಎಂದರು

ಬಿಡದಿ ಕನ್ನಡ ಬಳಗದ ಮುಖಂಡ ಮಂಜುನಾಥ ಸನ್ಮಾನ ಹಾಗು ಬಹುಮಾನ ಕಾರ್ಯಕ್ರಮ ನಡೆಸಿ ಕೊಟ್ಟರು.ಪ್ರಥಮ ಸ್ಥಾನ ಸರಕಾರಿ ಪ್ರೌಢ ಶಾಲೆ ಜಂಬಗಿ ಅನ್ನಪೂರ್ಣ ದೇಶಮುಖ 61୮ ಅಂಕ ಪಡೆದಿದ್ದಾಳೆ.ದ್ವಿತೀಯ ಸ್ಥಾನ ಸರಕಾರಿ ಪ್ರೌಢ ಶಾಲೆ ಮಮದಾಪೂರ ಗಂಗವ್ವಾ ಪೂಜಾರಿ 618 ಅಂಕ ಪಡೆದಿದ್ದಾಳೆ. ತೃತೀಯ ಸ್ಥಾನ ಸರಕಾರಿ ಪ್ರೌಢ ಶಾಲೆ ಚಟ್ಟರಕಿ ವೈಶಾಲಿ ಹಿರೇಮಠ 617 ಅಂಕ ಪಡೆದುಕೊಂಡಿದ್ದಾಳೆ.

ವೇದಿಕೆಯ ಮೇಲೆ ಗ್ರಾಮ ಪಂಚಾಯತ ಅಧ್ಯಕ್ಷ ಪೈಗಂಭರ ಮುಲ್ಲಾ. ಶ್ರೀಮಂತರಾವ ದೇಶಮುಖ. ಚಿದಾನಂದ ಆವಗೊಂಡ ಉಪಸ್ಥಿತರಿದ್ದರು

ವಿದ್ಯಾರ್ಥಿಗಳಾದ ಮಂಗಳಾ. ಚೈತ್ರಾ.ನೀಲವ್ವ.ಗುರುಬಾಯಿ ನಾಡಗೀತೆ ಹಾಡಿದರುಶಿಕ್ಷಕರಾದ ಆರತಿ ಗಾಣಿಗೇರ ಎ ಆರ್ ತುಬಾಕೆ . ಎಸ್ ಎಸ್ ಜತ್ತಿ.ಎಸ್ ಎಸ್ ಜತ್ತಿ. ಎಸ್ ಎಮ್ ಕುಂಬಾರ.ರಿಯಾಜ ಮುಜಾವರ.

ಸಾವಿತ್ರಿ ಅಂಗಡಿ. ಚಂದ್ರಶೇಖರ ಅರವತ್ತು .ಪ್ರಭಾವತಿ ಐಗಳಿ. ಕಲ್ಲಪ್ಪಾ ಕಾಂಬಳೆ.ಎನ್ ಬಿ ಬಿರಾದಾರ ಭಾಗವಹಿಸಿದ್ದರು.

ಬಿಡದಿ ಮೈಕೊ ಕನ್ನಡ ಬಳಗದ ಭಾಷ ಕಂಪನಿ ಪದಾಧಿಕಾ–ರಿಗಳಾಧ ರಾಮತೀಥ–ರ್ . ಕೃಷ್ಣಮೂರ್ತಿಸಿದ್ದರಾಮ ಹಣಮಶೆಟ್ಟಿ. ರಮೇಶ ಮರನೂರಸಂಗಣ್ಣ ಸಾಹುಕಾರ. ಚೇತನ. ವೀರಬದ್ರಪ್ಪ .ಮುಂತಾದವರು ಉಪಸ್ಥಿತರಿದ್ದರು.

# ರಾಮದುರ್ಗ: ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ



**ರಾಮದುರ್ಗ** : ತಾಲ್ಲೂಕಿನಲ್ಲಿ ಜನಪ್ರತಿನಿಧಿಗಳ ಮಾತಿಗೆ ಮಣ್ಣನೆ ನೀಡದೆ ತಮಗೆ ಬೇಕಾದವರನ್ನು ಆಡಳಿತ ಕಚೇರಿಯಲ್ಲಿ ಇಟ್ಟುಕೊಂಡು ಅಂಗವೈಕಲ್ಯ ಇರುವ ಸಿಬ್ಬಂದಿಯನ್ನು ಅಲ್ಲಲ್ಲಿ ಸುತ್ತಾಡಲು ಕಳಿಸುತ್ತಿದ್ದಾರೆ. ಇಂಥ ಅಧಿಕಾರಿಗಳ ಅಗತ್ಯ ರಾಮದುರ್ಗ ಕ್ಷೇತ್ರಕ್ಕೆ ಬೇಡವಾಗಿದೆ ಎಂದು ವಿಧಾನ ಸಭೆಯ ಮುಖ್ಯ ಸಚೇತಕ ಅಶೋಕ ಪಟ್ಟಣ ಸಿಡಿಮಿಡಿಗೊಂಡರು.

ತಾಲ್ಲೂಕು ಪಂಚಾಯಿತಿ ಸಭಾಸಭವನದಲ್ಲಿ ಸೋಮವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಏರುಧನಿಯಲ್ಲಿ ಮಾತನಾಡಿದರು. ಕಳೆದ ಹಲವಾರು ವರ್ಷಗಳಿಂದ ಕಚೇರಿಯಲ್ಲಿ ಠಿಕಾಣಿ ಹೂಡಿರುವ ನೌಕರರನ್ನು ಬೇರೆ ಕೆಲಸಕ್ಕೆ ನೇಮಕ ಮಾಡಲು ಸೂಚನೆ ನೀಡಿದ್?ರ ಶಾಸಕರ ಮಾತಿಗೆ ಮನ್ನಣೆ ನೀಡುತ್ತಿಲ್ಲ. ಈ ವಿಷಯದಲ್ಲಿ ಕಾಲಹರಣ ಮಾಡುತ್ತ ಸುಳ್ಳು ಹೇಳುತ್ತಿರುವುದಕ್ಕೆ ಸಿಡಿಪಿಓ ಶಂಕರ ಕುಂಬಾರ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಸಭೆಯಲ್ಲಿದ್ದ ನೋಡಲ್ ಅಧಿಕಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಎಂ.ಎನ್. ಚೇತನಕುಮಾರ ಮಧ್ಯ ಪ್ರವೇಶಿಸಿ, ಸರಿ ಪಡಿಸುವ ಭರವಸೆ ನೀಡಿದರು.

ಕಾರ್ಮಿಕ ಇಲಾಖೆಯ ಅಧಿಕಾರಿ ನಾಗರಾಜ ಸರಿಯಾಗಿ ಕಚೇರಿಯಲ್ಲಿ ಇರುವುದಿಲ್ಲ. ಶಾಸಕರು ಖುದ್ದಾಗಿ ಕಚೇರಿಗೆ ಹೋದಾಗಲೂ ಕಚೇರಿಯಲ್ಲಿ ಇರುವುದಿಲ್ಲ. ಆಗೊಮ್ಮೆ ಈಗೊಮ್ಮೆ ಬಂದು ಹೋಗುವ ಅವರು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಕಾರ್ಮಿಕರಿಗೆನ್ಯಾಯಸಿಗುತ್ತಿಲ್ಲ.ಕಾರ್ಮಿಕರು ಕಾರ್ಡುಗಳನ್ನು ಕೇಳಲು ಬಂದರೆ ಅವರ ಏಜೆಂಟರ್ ಮೂಲಕ ಲಂಚ ಪಡೆಯುತ್ತಾರೆ. ಈ ಬಗ್ಗೆ ಲೋಕಾಯುಕ್ತರಿಗೆ ದೂರು ನೀಡಲಾಗುವುದು ಎಂದು ಎಚ್ಚರಿಸಿದರು.

ಕಳೆದ ಹಲವಾರು ದಶಕಗಳಿಂದ ಗ್ರಾಮದ ಪಕ್ಕದಲ್ಲಿರುವ ಅರಣ್ಯ ಪ್ರದೇಶದಲ್ಲಿ ಮನೆ ನಿರ್ಮಾಣಮಾಡಿದಗ್ರಾಮಸ್ಥರಮನೆಗಳನ್ನು ತೆರವುಗೊಳಿಸುವುದಕ್ಕೆ ಅರಣ್ಯಾಧಿಕಾರಿ ಭಾಗ್ಯಶ್ರೀ ಮಸಳಿ ದರ್ಪದಿಂದ ಮುಂದಾಗಿದ್ದಾರೆ. ಹಳೆ ಮನೆಗಳನ್ನು ತೆರವು ಮಾಡವಂತಿಲ್ಲ. ಹೊಸ ಮನೆಗಳ ನಿರ್ಮಾಣಕ್ಕೆ ಅವಕಾಶ ನೀಡಬಾರದು ಎಂದು ತಾಕೀತು ಮಾಡಿದರು.

ಗ್ರಾಮೀಣ ಪ್ರದೇಶದ ಪ್ರತಿ ಮನೆಗೆ ನೀರು ಪೂರೈಕೆ ಮಾಡುವ ಜೆಜೆಎಂ ಕಾಮಗಾರಿ ಆರಂಭವಾಗಿ ಹಲವು ವರ್ಷ ಕಳೆದರೂ ಕಾಮಗಾರಿ ಇನ್ನು ಮುಗಿದಿಲ್ಲ. ಕಾಮಗಾರಿ ಮುಗಿದಲ್ಲಿ ರಸ್ತೆಗಳನ್ನು ಗುತ್ತಿಗೆದಾರರಿಂದ ರಸ್ತೆ ಮಾಡಿಸದಿರುವುದಕ್ಕೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಎಂಜಿನಿಯರ್ ಅವರನ್ನು ಶಾಸಕರು ತರಾಟೆಗೆ ತೆಗೆದುಕೊಂಡರು.

ಮುದೇನೂರ ಗ್ರಾಮದಲ್ಲಿ ಮೇಲ್ಮಟ್ಟದ ಜಲಸಂಗ್ರಾಲಯ ಪಾಚಿಗಟ್ಟಿದ್ದು ಜನ ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ತ್ವರಿತವಾಗಿ ಟ್ಯಾಂಕ್ ಸ್ವಚ್ಛಗೊಳಿಸಿ ಶುದ್ಧ ನೀರು ಪೂರೈಸಬೇಕು. ಅದೇ ಗ್ರಾಮದಲ್ಲಿ ಒಂದು ಕೊಳವೆ ಬಾವಿ ಕೊರೆಯಿಸಿ ನೀರಿನ ಸಮಸ್ಯೆ ನೀಗಿಸಬೇಕು ಎಂದು ಸೂಚಿಸಿದರು. ಸಭೆಯಲ್ಲಿ ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಎಂ.ಎನ್. ಚೇತನಕುಮಾರ, ತಾಲ್ಲೂಕು ಪಂಚಾಯಿತಿ ಇಓ ಬಸವರಾಜ ಐನಾಪೂರ, ತಹಶೀಲ್ದಾರ್ ಪ್ರಕಾಶ ಹೊಳೆಪ್ಪಗೋಳ ಇದ್ದರು.

**ಕ್ರಿಯಾ ಯೋಜನೆಗೆ ಸೂಚನೆ**

ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 50 ಕೋಟಿ ಅನುದಾನ ಲಭ್ಯವಾಗಲಿದ್ದು ಇದರಲ್ಲಿ ತಾಲ್ಲೂಕಿನ ಮುಖ್ಯರಸ್ತೆಗಳ ಅಭಿವೃದ್ಧಿಗೆ ?37 ಕೋಟಿ ಮತ್ತು ಗ್ರಾಮೀಣ ಮತ್ತುರೈತರಜಮೀನುಗಳಿಗೆತೆರಳುವರಸ್ತೆಗೆ 12.50 ಕೋಟಿ ವೆಚ್ಚದ ಕ್ರಿಯಾಯೋಜನೆ ಸಿದ್ಧ ಪಡಿಸಲು ಲೋಕೋಪಯೋಗಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಹಳೆ ವೈಷಮ್ಯ: ಕಟಕೋಳ ರಸ್ತೆಯಲ್ಲಿ ಯುವಕನ ಕೊಲೆ



**ಯರಗಟ್ಟಿ:** ಇಲ್ಲಿನ ಕಟಕೋಳ ರಸ್ತೆಯಲ್ಲಿರುವ ಹೊಲದಲ್ಲಿ ಭಾನುವಾರ ರಾತ್ರಿ ಮದುವೆ ಪಾರ್ಟಿ ಮಾಡುತ್ತಿದ್ದ ವೇಳೆ ಯುವಕನಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ವಿನೋದ ಚಂದ್ರಶೇಖರ ಮಲಶೆಟ್ಟಿ (25) ಕೊಲೆಯಾದವರು. ವಿಠ್ಠಲ್ ಮುದಕಪ್ಪ ಹಾರುಗೊಪ್ಪ ಆರೋಪಿ.

ಈ ಇಬ್ಬರ ಮಧ್ಯೆ ಕೆಲವು ದಿನಗಳ ಹಿಂದೆ ಹಣಕಾಸಿನ ವ್ಯವಹಾರಕ್ಕಾಗಿ ಜಗಳ ನಡೆದಿತ್ತು. ಪರಸ್ಪರ ಮಾತನಾಡುವುದನ್ನು ಬಿಟ್ಟಿದ್ದರು. ಇಬ್ಬರ ಗೆಳೆಯ ಅಭಿಷೇಕ ವೆಂಕಪ್ಪ ಕೊಪ್ಪದ ಅವರು ತಮ್ಮ ಮದುವೆಯಾದ ಕಾರಣ ಹೊಲದಲ್ಲಿ ಪಾರ್ಟಿ ಇಟ್ಟಿದ್ದರು. ಊಟ ಮಾಡುವಾಗ ಆರೋಪಿ ವಿಠ್ಠಲನು ಮೃತ ವಿನೋದಗೆ ಚಿಕನ್ ಪೀಸ್ ಹಾಕಲು ಹೇಳಿದ. ಆಗ ಇಬ್ಬರ ಮಧ್ಯೆ ಮಾತಿಗೆ ಮಾತು ಬೆಳೆದು ಜಗಳ ಶುರುವಾಯಿತು.

ಹತ್ತಿರದಲ್ಲೇ ಇದ್ದ ಚಾಕು ತೆಗೆದುಕೊಂಡು ವಿಠ್ಠಲನು ವಿನೋದನ ಎಡಭಾಗದ ಎದೆಗೆ ಚುಚ್ಚಿದ. ತೀವ್ರ ನಿತ್ರಾಣಗೊಂಡ ವಿನೋದ ಅವರನ್ನು ಆಸ್ಪತ್ರೆಗೆ ಸಾಗಿಸುವ ವೇಳೆ ಮೃತಪಟ್ಟರು ಎಂದು ಗೆಳೆಯರು ದೂರಿನಲ್ಲಿ ತಿಳಿಸಿದ್ದಾರೆ.


# ಹಿರೇಬಾಗೇವಾಡಿಯಲ್ಲಿ ಕಳ್ಳನ ಬಂಧನ: ಐದು ಬೈಕ್ ವಶ



**ಹಿರೇಬಾಗೇವಾಡಿ :** ದ್ವಿಚಕ್ರ ವಾಹನ ಕಳ್ಳತನ ಪ್ರಕರಣ ಸಂಬಂಧ ಸವದತ್ತಿ ತಾಲ್ಲೂಕಿನ ಇಂಚಲದ ಆರೋಪಿ ಸಂತೋಷಬೇವಿನಕೊಪ್ಪನನ್ನುಸ್ಥಳೀಯಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ ?2.35 ಲಕ್ಷ ಮೌಲ್ಯದ ಐದು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ.

ಹಿರೇಬಾಗೇವಾಡಿಯಲ್ಲಿ ಸೋಮವಾರ ಸಂಶಯಾಸ್ಪದ ರೀತಿಯಲ್ಲಿ ಸಂಚರಿಸುತ್ತಿದ್ದ ಸಂತೋಷ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಐದು ದ್ವಿಚಕ್ರ ವಾಹನ ಕದ್ದಿದ್ದಾಗಿ ಒಪ್ಪಿಕೊಂಡಿದ್ದಾನೆ. ಬೈಲಹೊಂಗಲ ತಾಲ್ಲೂಕಿನ ನೇಸರಗಿ ವ್ಯಾಪ್ತಿಯಲ್ಲಿ ನಡೆದಿದ್ದ ಎರಡು, ಹಿರೇಬಾಗೇವಾಡಿ, ಹುಬ್ಬಳ್ಳಿ ಮತ್ತು ಬಾಗಲಕೋಟೆ ಜಿಲ್ಲೆಯ ಲೋಕಾಪುರದಲ್ಲಿ ನಡೆದಿದ್ದ ತಲಾ ಒಂದು ಪ್ರಕರಣ ಭೇದಿಸಿದಂತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

# ಗುಡಸ ಕುರಿಗಾಹಿಗಳಿಂದ ಜಾಗೆ ಉಳಿಸಿಕೊಳ್ಳಲು ಪ್ರತಿಭಟನೆ



ಹುಕ್ಕೇರಿ: ಗುಡಸ ಗ್ರಾಮದಲ್ಲಿರುವ ಗಾಯರಾಣ ಜಾಗೆಯನ್ನು ಹಸ್ತಾಂತರ ಮಾಡಬಾರದು. ಅತಿಕ್ರಮಣ ಮಾಡಿದವರನ್ನು ತೆರುವುಗೊಳಿಸಲು ಉದಾಸೀನ ಮಾಡುತ್ತಿರುವ ಕ್ರಮವನ್ನು ಖಂಡಿಸಿ ತಾಲ್ಲೂಕಿನ ವಿವಿಧ ಗ್ರಾಮಗಳ (ಮಹಿಳೆಯರು ಸೇರಿ) ಕುರಿಗಾಹಿಗಳು ಕುರಿಸಮೇತ ಪಟ್ಟಣದಲ್ಲಿ ಸೋಮವಾರ ವಿನೂತನವಾಗಿ ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಗುಡಸ್, ಬೆಲ್ಲದ ಬಾಗೇವಾಡಿ, ಶಿರಹಟ್ಟಿ, ಸಾರಾಪುರ, ಬೆಳವಿ, ಕೊಟಬಾಗಿ, ಕಡಹಟ್ಟಿಗ್ರಾಮದ ಕುರಿಗಾಹಿಗಳು ನೂರಾರು ಕುರಿ ಸಮೇತ ಕೋರ್ಟ್ ಸರ್ಕಲ್ ಬಳಿ ಬಂದು ಪ್ರತಿಭಟನೆಗೆ ನಡೆಸಿ ಗಮನ ಸೆಳೆದರು.

ಹಾಲುಮತ ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷ ಜಯಪ್ರಕಾಶ್ ಕರ್ಜಗಿ, ವಕೀಲ ಭೀಮಸೇನ್ ಬಾಗಿ, ಏಳು ಒಕ್ಕೂಟದ ಅಧ್ಯಕ್ಷ ಶಂಕರ್ ಹೆಗಡೆ, ಗುಡಸ ಗ್ರಾಮದ ಸಿಂಧೂರ ಕರಿಗಾರ, ಬಸವರಾಜ ಹಾಲಟ್ಟಿ, ಎಸ್.ವೈ.ಏಗನ್ನವರ, ನವೀನ ಮುತ್ನಾಳ ಮಾತನಾಡಿ, ಹಲವು ಬಾರಿ ಈ ಕುರಿತು ತಾಲ್ಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದರೂ, ಕವಡೆ ಕಾಸಿನ ಕಿಮ್ಮತ್ತು ಕೊಡದೆ, ನಿರ್ಲಕ್ಷ್ಯ ತೋರಿದ್ದಕ್ಕೆ ಪ್ರತಿಭಟನೆ ಮಾಡುತ್ತಿದ್ದೇವೆ ಎಂದು ದೂರಿದರು.

ಹೋರಾಟ ವಿಸ್ತರಣೆ: ಇನ್ನು ಮುಂದೆ ಯಾವುದೇ ಕ್ರಮ ಜರುಗಿಸದೆ ಇದ್ದಲ್ಲಿ, ಜಿಲ್ಲೆಯಾದ್ಯಂತ, ರಾಜ್ಯದಾದ್ಯಂತ ಕುರಿ ಸಮೇತ ಹೋರಾಟ ಮಾಡುವ ಎಚ್ಚರಿಕೆಯನ್ನು ಮುಖಂಡರು ನೀಡಿದರು. ತಹಶೀಲ್ದಾರ್ ಬರುವವರೆಗೆ ಪ್ರತಿಭಟನೆ ಹಿಂಪಡೆಯುವದಿಲ್ಲ ಎಂದು ಕೋರ್ಟ್ ಸರ್ಕಲ್‌ನಲ್ಲಿ ಕುಳಿತರು.

ಜನರಿಗೆ ತೊಂದರೆ: ಸೋಮವಾರ ಸಂತೆ ದಿನವಾದ್ದರಿಂದ ನಾಲ್ಕು ದಿಕ್ಕಿನಲ್ಲಿ ವಾಹಗಳು ಸೇರಿಕೊಂಡು ಟ್ರಾಫಿಕ್ ಜಾಮ್ ಆಯಿತು. ಪೊಲೀಸರು ಎಷ್ಟೇ ಹರಸಾಹಸ ಮಾಡಿದರೂ ಪ್ರತಿಭಟನೆಕಾರರು ಪಟ್ಟು ಸಡಿಲಿಸಲಿಲ್ಲ. ಗ್ರೇಡ್?2 ತಹಶೀಲ್ದಾರ್ ಪ್ರಕಾಶ ಕಲ್ಲೋಳಿ ಮನವಿ ಸ್ವೀಕರಿಸಲು ಬಂದಾಗ, ಪ್ರತಿಭಟನಾಕಾರರು ವಾಗ್ವಾ ಮಾಡಿ, ಪ್ರಮಾಣ ಪತ್ರ ಕೊಡುವಂತೆ ಆಗ್ರಹಿಸಿದರು.

ತಹಶೀಲ್ದಾರ್‌ಮಂಜುಳಾನಾಯಕ್ ಸ್ಥಳಕ್ಕೆ ಬರುವಂತೆ ಆಗ್ರಹಿಸಿದರು. ನಂತರ ತಹಶೀಲ್ದಾರ್ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು.

ವಿವಿಧ ಗ್ರಾಮಗಳ ಮುಖಂಡರಾದ ಬಸವಣ್ಣಿ ನಿಡಸೋಸಿ, ಲಕ್ಕಪ್ಪ ಹಾಲಟ್ಟಿ, ಬೀರಪ್ಪ ಮನ್ನಿಕೇರಿ, ಬಸಪ್ಪ ವಂಟಮೂರಿ, ರಾಯಪ್ಪ ಪಾಮಲದಿನ್ನಿ, ಆನಂದ ಖಿಲಾರಿ, ವಿಠಲ್ ಹಾಲಟ್ಟಿ, ಸಿದ್ದಪ್ಪ ಗೋಟೂರಿ, ಸಚಿನ ಹೆಗಡೆ, ನಿತೀನ ಮುತ್ನಾಳ ಸೇರಿದಂತೆ ನೂರಾರು ಕುರಿಗಾಹಿಗಳು ಇದ್ದರು.

**ತಹಶೀಲ್ದಾರ್ ಭರವಸೆ**

ಮನವಿ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರ್ ಅವರು ಈ ವಿಷಯ ಕುರಿತು ನೋಟಿಸ್ ಬೋರ್ಡ್‌ಗೆ ಹಾಕಿ ನೋಟೀಸ್ ಕೊಡಲಾಗಿದೆ. ಪೊಲೀಸರ ಸಹಾಯದಿಂದ ಅತಿಕ್ರಮಣ ಮಾಡಿದವರನ್ನು (ಬೇರೆ ತಾಲ್ಲೂಕಿನಿಂದ ಬಂದವರು) ತೆರವು ಮಾಡಲಾಗುವುದು ಎಂದು ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂಪಡೆಯಲಾಯಿತು.

# ಸವದತ್ತಿ: ಟ್ಯಾಂಕ್‌ನಲ್ಲಿ ಕ್ರಿಮಿನಾಶಕ; 3 ವಿದ್ಯಾರ್ಥಿಗಳು ಅಸ್ವಸ್ಥ



ಸವದತ್ತಿ (ಬೆಳಗಾವಿ ಜಿಲ್ಲೆ): ಕ್ರಿಮಿನಾಶಕ ಬೆರೆಸಿದ್ದ ನೀರು ಕುಡಿದು ಸೋಮವಾರ ತಾಲ್ಲೂಕಿನ ಹೂಲಿಕಟ್ಟಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮೂವರು ಮಕ್ಕಳು ಅಸ್ವಸ್ಥಗೊಂಡಿದ್ದಾರೆ.

ಶಿಕ್ಷಕರು ತಕ್ಷಣವೇ ಆಂಬುಲೆನ್ಸ್ ಕರೆಸಿ, ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿದರು. ಈ ಕುರಿತು ಪ್ರಕರಣ ದಾಖಲಾಗಿದೆ.

ಟ್ಯಾಂಕ್ ಸುತ್ತಲಿನ ವಾಸನೆ ಹಾಗೂ ಹತ್ತಿರ ಸಿಕ್ಕ ಬಾಟಲಿಯಿಂದ ಟ್ಯಾಂಕ್‌ಗೆ ದುಷ್ಕರ್ಮಿಗಳು ಕೀಟನಾಶಕ ಔಷಧಿ ಬೆರೆಸಿದ್ದಾರೆ ಎಂದು ವೈದ್ಯರು ಪರೀಕ್ಷಿಸಿ ದೃಢ ಪಡಿಸಿದ್ದಾರೆ.

# ದೇವನಹಳ್ಳಿ ಭೂ ಹೋರಾಟ ಯಶಸ್ವಿ: ಕೊಪ್ಪಳದಲ್ಲಿ ವಿಜಯೋತ್ಸವ

**ಕೊಪ್ಪಳ :** ದೇವನಹಳ್ಳಿ ಭೂ ಹೋರಾಟಕ್ಕೆ ಜಯ ಲಭಿಸಿದ್ದಕ್ಕೆ ಇಲ್ಲಿನ ಅಶೋಕ ವೃತ್ತದಲ್ಲಿ ಮಂಗಳವಾರ ಕಾರ್ಖಾನೆ ವಿಸ್ತರಣೆ ವಿರೋಧಿ ಹೋರಾಟಗಾರರು, ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಮತ್ತು ಪರಿಸರ ಹಿತರಕ್ಷಣಾ ವೇದಿಕೆ ಸದಸ್ಯರು ವಿಜಯೋತ್ಸವ ಆಚರಿಸಿ ಸಿಹಿ ಹಂಚಿ ಸಂಭ್ರಮಿಸಿದರು.




ಆಂದೋಲನ ಸಮಿತಿ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ 'ಸುದೀರ್ಘ ಹೋರಾಟದ ನಂತರ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ರೈತಪರ ಎಂಬ ಸಂದೇಶ ನೀಡಿದ್ದು ಭೂಮಿಯ ಸ್ವಾಧೀನ ಕೈಬಿಟ್ಟಿರುವುದು ಸ್ವಾಗತಾರ್ಹ. ಅದರಂತೆ ಕೊಪ್ಪಳ ಸೇರಿದಂತೆ ರಾಜ್ಯದ ನಾನಾ ಕಡೆಗಳಲ್ಲಿ ಕಾರ್ಖಾನೆ, ಅಭಿವೃದ್ಧಿ ಹೆಸರಲ್ಲಿ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿರುವುದನ್ನು ಕೂಡ ಕೈಬಿಡಬೇಕು. ಕೃಷಿ ಭೂಮಿ ಉಳಿಯಬೇಕು' ಎಂದು ಆಗ್ರಹಿಸಿದರು.

ದೇವನಹಳ್ಳಿ ಮಾದರಿಯಲ್ಲಿ ಕೊಪ್ಪಳ ನಗರಕ್ಕೆ ಹೊಂದಿಕೊಂಡು ಮೋಸದಿಂದ ಹೆಸರು ಬದಲಿಸಿಕೊಂಡು ಬಂದಿರುವ ಬಲ್ಡೋಟಾದ ಉಕ್ಕಿನ ಕಾರ್ಖಾನೆ ಸೇರಿದಂತೆ ಜನರಿಗೆ ಮಾರಕವಾಗಿರುವ ಎಲ್ಲಾ ಕಾರ್ಖಾನೆಗಳನ್ನು ಕೊಪ್ಪಳದಿಂದ ಸ್ಥಳಾಂತರ ಮಾಡಬೇಕು' ಎಂದು ಒತ್ತಾಯಿಸಿದರು.

ಮುಖಂಡ ಮಂಜುನಾಥ ಜಿ. ಗೊಂಡಬಾಳ ಮಾತನಾಡಿ 'ಆಗಸ್ಟ್ 4ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಪ್ಪಳಕ್ಕೆ ಬರುತ್ತಿದ್ದಾರೆ. ಅಂದು ಅವರು ಬಲ್ಡೋಟಾ ಹಾಗೂ ಕಿರ್ಲೋಸ್ಕರ್ ಕಾರ್ಖಾನೆಗಳ ವಿಸ್ತರಣೆಗೆ ನೀಡಿರುವ ಅನುಮತಿ ಅಧಿಕೃತವಾಗಿ ರದ್ದುಗೊಳಿಸಿ ಆದೇಶ ನೀಡಿದರೆ ಅವರ ಜನ್ಮದಿನವನ್ನು ಇಲ್ಲಿನ ಜನರೇ ದೊಡ್ಡಮಟ್ಟದಲ್ಲಿ ಅತ್ಯಂತ ಸಡಗರದಿಂದ ಆಚರಿಸುತ್ತಾರೆ' ಎಂದು ಹೇಳಿದರು.

ಹೋರಾಟಗಾರರಾದ ಬಸವರಾಜ ಶೀಲವಂತರ, ಕೆ.ಬಿ.ಗೋನಾಳ, ಮಹಾಂತೇಶ ಕೊತಬಾಳ, ಶರಣು ಗಡ್ಡಿ, ಭೀಮಸೇನ ಕಲಕೇರಿ, ತಿಪ್ಪಯ್ಯಸ್ವಾಮಿ ಹೊಲಗೇರಿ, ಕನಕಪ್ಪ ಪೂಜಾರ, ಬಂದೇನವಾಜ್ ಮಣಿಯಾರ, ಗಾಳೆಪ್ಪ ಮುಂಗೋಲಿ, ಕಾಸೀಂ ಸರ್ದಾರ್, ನಾಗರಾಜ್ ಜಿ., ಮಕ್ಬೂಲ್ ರಾಯಚೂರು, ಪರಶುರಾಮ ವಣಗೇರಿ ಇಂದರಗಿ, ಮುತ್ತುರಾಜ್ ಹಡಪದ, ಗವಿಸಿದ್ದಪ್ಪ ಹಲಿಗಿ ಕುಣಿಕೇರಿ, ರಮೇಶ ಬೂದಗುಂಪಿ, ಮುದುಕಪ್ಪ ಹೊಸಮನಿ, ಆನಂದ ಗೊಂಡಬಾಳ, ಗವಿಸಿದ್ದಪ್ಪ ಹಂಡಿ ಪಾಲ್ಗೊಂಡಿದ್ದರು.

# ಶಾಲೆ ಅಂಗಳದಲ್ಲೇ ಅಂತ್ಯಕ್ರಿಯೆಗೆ ಸಿದ್ಧತೆ



**ಕೊಪ್ಪಳ :** ಜಿಲ್ಲಾ ಕೇಂದ್ರದ ಸಮೀಪದಲ್ಲಿರುವ ಮಂಗಳಾಪುರದಲ್ಲಿ ಶವ ಸಂಸ್ಕಾರಕ್ಕೆ ಜಾಗವಿಲ್ಲದ ಕಾರಣ ಶಾಲೆಯ ಆವರಣದಲ್ಲಿಯೇ ಶವಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಂಡು ಗ್ರಾಮಸ್ಥರು ಸೋಮವಾರ ತಾಲ್ಲೂಕು ಆಡಳಿತದ ವಿರುದ್ಧ ಆಕ್ರೋಶ ಹೊರಹಾಕಿದರು. ಸಾವಂತ್ರಮ್ಮ ಮೆಳ್ಳಿಕೇರಿ (80) ಎಂಬ ಮಹಿಳೆ ಮೃತಪಟ್ಟಿದ್ದು, ಹಿಂದೂಗಳ ಅಂತಿಮ ಸಂಸ್ಕಾರ ಸಲ್ಲಿಸಲು ಜಾಗ ಇಲ್ಲದಿರುವುದರಿಂದ ಕುಟುಂಬಸ್ಥರು ಅಂತ್ಯಕ್ರಿಯೆಗೆ ಪರದಾಡುವಂತಾಯಿತು.

ಸ್ಮಶಾನ ಸೌಲಭ್ಯ ಕಲ್ಪಿಸುವಂತೆ ಅನೇಕ ಬಾರಿ ಮನವಿ ಮಾಡಿದ್ದರೂ ಬೇಡಿಕೆ ಈಡೇರಿರಲಿಲ್ಲ. ಸಾವಂತ್ರಮ್ಮ ಅವರಿಗೆ ಯಾವುದೇ ಜಮೀನು ಇಲ್ಲದ ಕಾರಣ ಅನಿವಾರ್ಯವಾಗಿ ರಸ್ತೆ ಮಧ್ಯದಲ್ಲಿಯೇ ಅಂತ್ಯಕ್ರಿಯೆಗೆ ಸಿದ್ಧತೆ ನಡೆಸಿದರು.

ಗ್ರಾಮಸ್ಥರು ಶಾಲೆ ಮುಂಭಾಗದ ರಸ್ತೆಯಲ್ಲಿ ಕಟ್ಟಿಗೆ ಜೋಡಿಸಿ ಅಂತ್ಯಕ್ರಿಯೆ ಮಾಡುವುದಾಗಿ ಪಟ್ಟು ಹಿಡಿದಾಗ ಕೊಪ್ಪಳ ತಹಶೀಲ್ದಾರ್ ವಿಠ್ಠಲ ಚೌಗುಲಾ ಹಾಗೂ ಪೊಲೀಸರು ಗ್ರಾಮಕ್ಕೆ ದೌಡಾಯಿಸಿದರು.

ಶವ ಸಂಸ್ಕಾರಕ್ಕೆ ಜಾಗವಿಲ್ಲ. ಹಲವು ಬಾರಿ ಮನವಿ ಮಾಡಿದರೂ ಸ್ಪಂದಿಸಿಲ್ಲ. ಈಗ ಬಂದು ಸಮಾಧಾನ ಮಾಡಬೇಡಿ' ಎಂದು ಗ್ರಾಮಸ್ಥರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಕೆಲ ಹೊತ್ತು ಮಾತಿನ ಚಕಮಕಿಯೂ ನಡೆಯಿತು.

ಅಧಿಕಾರಿಗಳು ಹಾಗೂ ಪೊಲೀಸರ ಮನವೊಲಿಕೆ ಬಳಿಕ ಹಳ್ಳಕ್ಕೆ ತೆರಳುವ ರಸ್ತೆಯ ಬದಿಯಲ್ಲಿ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.

# ಮಾವು ಬೆಳೆಗಾರರಿಗಿಲ್ಲ ಬೆಲೆಯ ಚಿಂತೆ, ಯಾಕೆ ಅಂತೀರಾ

**ಕೊಪ್ಪಳ :** ರಾಜ್ಯದ ನಾನಾ ಕಡೆಗಳಲ್ಲಿ ಮಾವು ಬೆಳೆಗಾರರು ಬೆಲೆ ಇಳಿಕೆಯಿಂದ ಕಂಗಾಲಾಗಿದ್ದರೆ, ಕೊಪ್ಪಳದ ಮಾವು ಬೆಳಗಾರರಿಗೆ ಬೆಲೆ ಏರಿಳಿತದ ಬಿಸಿಯೇ ತಟ್ಟಿಲ್ಲ.

ಶ್ರಾವಣ ಮಾಸ ಆರಂಭವಾಗುವ ಮುನ್ನ ಇವುಗಳನ್ನು ಮರೆಯದೇ ಮಾಡಿದರೆ ಒಳ್ಳೆಯದು

ತಾಯಿಯಂತೆ ಪ್ರೀತಿ ತೋರುತ್ತಿದ್ದರು'; ಸರೋಜಾದೇವಿ ನಿಧನಕ್ಕೆ ಶಿವಣ್ಣ, ದರ್ಶನ್, ರಮ್ಯಾ ಸಂತಾಪ

ಅಣ್ಣಾವ್ರ ಕುಟುಂಬದ ಜೊತೆ ಸರೋಜಾದೇವಿ ಅನುಬಂಧ; ಪಾರ್ವತಮ್ಮಗೆ 'ನವರಸ ನಾಯಕಿ' ಎಂದು ಕರೆದಿದ್ದ 'ಅಭಿನಯ ಸರಸ್ವತಿ'

ಸಿದ್ದರಾಮಯ್ಯಗೆ ಬಂದ ಆ ಒಂದು ಫೋನ್ ಕಾಲ್, 5 ವರ್ಷ ನೀವೇ ಸಿಎಂ' ಅಂತ ಹೇಳಿ ಅಂದಿದ್ಯಾರು?, ಒಂದೇ ಕರೆಯಲ್ಲಿ ಆಟವೇ ಬದಲು!



ಕೊಪ್ಪಳ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ–ಗ್ರಾಮಾಂತರ, ರಾಮನಗರ, ತುಮಕೂರು, ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಹಾವೇರಿ, ಬೀದರ್, ಬಾಗಲಕೋಟೆ, ಚಿತ್ರದುರ್ಗ, ರಾಣೆಬೆನ್ನೂರು ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಮಾವು ಹೆಚ್ಚಿಗೆ ಬೆಳೆಯಲಾಗುತ್ತಿದೆ.

ಶೇ. 40 ರಷ್ಟು ಮಾವು ಉತ್ಪಾದಿಸುವ ಕೋಲಾರ, ಶ್ರೀನಿವಾಸಪುರ, ಚಿಂತಾಮಣಿ ಸೇರಿ ಕರ್ನಾಟಕದ ಗಡಿ ಪ್ರದೇಶದಲ್ಲಿ ವ್ಯಾಪಕವಾಗಿ ತೋತಾಪುರಿ ಮಾವು ಬೆಳೆಯಲಾಗುತ್ತದೆ.

**ಮಾವಿಗೆ ಬೆಂಬಲ ಬೆಲೆ**

ಈ ಭಾಗದ ರೈತರಿಗೆ ಆಂಧ್ರ ಪ್ರದೇಶದ ಚಿತ್ತೂರು ಮಾರುಕಟ್ಟೆಯೇ ಪ್ರ ಮುಖ ವಾಣಿಜ್ಯ ಕೇಂದ್ರವಾಗಿದೆ.

ಆದರೆ, ಅನ್ಯ ರಾಜ್ಯಗಳಿಂದ ಚಿತ್ತೂರು ಮಾರುಕಟ್ಟೆಗೆ ಮಾವು ಮಾರಾಟವಾಗುತ್ತಿದ್ದು ಆಂಧ್ರ ಪ್ರದೇಶ ಸರಕಾರ ನಿಷೇಧ ಹೇರಿದ ಪರಿಣಾಮ ಸಮಸ್ಯೆಯಾಗಿತ್ತು. ಹೀಗಾಗಿ ಮಾವಿನ ಬೆಲೆ ಏಕಕಾಲಕ್ಕೆ ಪಾತಾಳಕ್ಕೆ ಕುಸಿದಿತ್ತು. ಹವಾಮಾನ ವೈಪರಿತ್ಯ ಸೇರಿ ನಾನಾ ಕಾರಣದಿಂದ ಪ್ರಸ್ತುತ ಕೆ.ಜಿ.ಗೆ ಮಾವು 20 ರಿಂದ 30 ರೂ.ವರೆಗೆ ಮಾರಾಟವಾಗುತ್ತಿದೆ.

ಕೇಂದ್ರ ಸರಕಾರ ಮಾವಿಗೆ ಬೆಂಬಲ ಬೆಲೆ ಘೋಷಿಸಿದ್ದರಿಂದ ಬೆಳೆಗಾರರಿಗೆ ಸ್ವಲ್ಪ ಅನುಕೂಲವಾಗಿದೆ.

**ಮಧ್ಯವರ್ತಿಗಳ ಒಡಂಬಡಿಕೆ**

ಆದರೆ ಕೊಪ್ಪಳ ಜಿಲ್ಲೆಯ ಬೆಳೆಗಾರರಿಗೆ ಬೆಲೆಯ ಏರಿಳಿತದ ಬಿಸಿಯೇ ತಟ್ಟಿಲ್ಲ. ಜಿಲ್ಲಾದ್ಯಂತ 4 ಸಾವಿರ ಎಕರೆ ಪ್ರದೇಶದಲ್ಲಿ ಮಾವು ಬೆಳೆಯಲಾಗಿದೆ.

ಪ್ರತಿ ವರ್ಷ ವಾರ್ಷಿಕ 45 ಸಾವಿರ ಮೆಟ್ರಿಕ್ ಟನ್‌ಗಿಂತ ಹೆಚ್ಚು ಬೆನೆಶಾನ್, ತೋತಾಪುರಿ, ರಸಪುರಿ, ಸ್ವರ್ಣರೇಖಾ, ಮಲ್ಲಿಕಾ, ಆಪೂಸು ಸೇರಿದಂತೆ ನಾನಾ ತಳಿಯ ಮಾವು ಬೆಳೆಯಲಾಗುತ್ತದೆ.

ಮಾವಿನ ಫಸಲು ಬರುವುದಕ್ಕೆ ಮುನ್ನವೇ ರೈತರೊಂದಿಗೆ ಮಧ್ಯವರ್ತಿಗಳು ಒಡಂಬಂಡಿಕೆ ಮಾಡಿಕೊಳ್ಳುತ್ತಿದ್ದಾರೆ.

ಆಂಧ್ರ ಹಾಗೂ ಸ್ಥಳೀಯರು ಇಳುವರಿ ಬರುವ ಮುನ್ನವೇ ಒಂದು ಎಕರೆಗೆ 2–3 ಲಕ್ಷ ರೂ.ವರೆಗೆ ಒಡಂಬಡಿಕೆ ಮಾಡಿಕೊಳ್ಳುತ್ತಾರೆ. ಶೇ. 90 ರಷ್ಟು ರೈತರು ಗುತ್ತಿಗೆ ನೀಡಿದ್ದಾರೆ.

ಈ ಷರತ್ತಿನನ್ವಯ ಮುಂಗಡ ಹಣ ನೀಡಿ ಮಧ್ಯವರ್ತಿಗಳು ರೈತರ ಜಮೀನಿನಲ್ಲಿ ಟೆಂಟ್ ಹಾಕಿ ವಾಸ್ತವ್ಯ ಹೂಡುತ್ತಾರೆ.

ಇದರಿಂದಾಗಿ ಬೆಲೆ ಏರಿಳಿತ ಸಮಸ್ಯೆಯು ಈ ಭಾಗದ ಬೆಳೆಗಾರರಿಗೆ ಕಾಡುತ್ತಿಲ್ಲ.

ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಕೃಷ್ಣ ಉಕ್ಕುಂದ ಅವರು ಮಾವು ಬೆಳೆಗಾರರಿಗೆ ಕೆಲ ವರ್ಷಗಳ ಹಿಂದೆ ಈ ಪದ್ಧತಿ ಪರಿಚಯಿಸಿದ ಹಿನ್ನೆಲೆಯಲ್ಲಿ ನಮಗೆ ಬೆಲೆಯ ಸಮಸ್ಯೆಯಾಗಿಲ್ಲ" ಎಂದು ತಾಲೂಕಿನ ಕೂಕನಪಳ್ಳಿ ಗ್ರಾಮದ ರೈತ ಈರಣ್ಣ ಸಂತಸ ವ್ಯಕ್ತಪಡಿಸಿದರು.

ಕೊಪ್ಪಳ ಜಿಲ್ಲೆಯ ರೈತರಿಗೆ ಮಾವಿನ ದರದ ಏರಿಳಿತ ಬಹಳಷ್ಟು ಕಾಡಿಲ್ಲ.

ಇಳುವರಿ ಬರುವ ವೇಳೆಯಲ್ಲಿ ಜಮೀನು ಲೀಸ್ ಪಡೆಯುತ್ತಿರುವುದರಿಂದ ರೈತರಿಗೆ ದರದ ಪರಿಣಾಮ ನೇರವಾಗಿ ತಟ್ಟಿಲ್ಲ. ವಾರ್ಷಿಕ ಆದಾಯ ಅವರಿಗೆ ಬರುತ್ತಿದೆ.

# ಉತ್ತರ ಕರ್ನಾಟಕದ ಶಕ್ತಿ ದೇವತೆ ಹುಲಿಗೆಮ್ಮನ ದೇವಸ್ಥಾನದಲ್ಲಿ ಹುಂಡಿ ಎಣಿಕೆ: ಕೋಟಿ ದಾಟಿದ ಭಕ್ತರ ಕಾಣಿಕೆ!



**ಕೊಪ್ಪಳ :** ಉತ್ತರ ಕರ್ನಾಟಕ ಶಕ್ತಿ ದೇವತೆ, ತಾಲೂಕಿನ ಹುಲಿಗಿ ಗ್ರಾಮದ ಶ್ರೀ ಹುಲಿಗೆಮ್ಮ ದೇವಿಯ ಹುಂಡಿಗೆ ಕಳೆದ ಒಂದು ತಿಂಗಳ 9 ದಿನದ ಅವಧಿಯಲ್ಲಿ ಹರಿದು ಬಂದಿರುವ ಕಾಣಿಕೆ ಕೋಟಿ ರೂ. ದಾಟಿದೆ.

ಒಂದೇ ಕರೆಯಲ್ಲಿ ಆಟವೇ ಬದಲು ಸೋಮವಾರ ದೇವಸ್ಥಾನದಲ್ಲಿ ಹುಂಡಿ ಎಣಿಕೆ ಮಾಡಲಾಗಿದ್ದು, ಒಂದು ಕೋಟಿ ಹದಿನೇಳು ಲಕ್ಷದ ಐವತ್ತೆರಡು ಸಾವಿರದ ಐದುನೂರು ಹದಿನೈದು ರೂಪಾಯಿ ಹಾಗೂ 133 ಕಚ್ಚಾ ಗ್ರಾಂ ಬಂಗಾರ, 10 ಕೆಜಿ ಕಚ್ಚಾ ಬೆಳ್ಳಿಯನ್ನು ಭಕ್ತರು ಕಾಣಿಕೆಯಾಗಿ ದೇವಿಗೆ ಸಮರ್ಪಿಸಿದ್ದಾರೆ. ಕಳೆದ ಜೂನ್ 5 ರಂದು ಹುಂಡಿ ಎಣಿಕೆ ಮಾಡಲಾಗಿತ್ತು. ಅಂದು ಕೂಡ ಕೋಟಿ ರೂ.ವರೆಗೆ ಕಾಣಿಕೆ ಹರಿದು ಬಂದಿತ್ತು.

# ಜಿ.ಪಂ, ತಾ.ಪಂ ಚುನಾವಣೆ ಬೇಗ ನಡೆಸಿ: ಎಸ್.ಜಿ. ನಂಜಯ್ಯನಮಠ

**ರಬಕವಿ ಬನಹಟ್ಟಿ :** ರಾಜ್ಯ ಸರ್ಕಾರ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ಆದಷ್ಟು ಬೇಗನೇ ನಡೆಸಬೇಕು. ಈ ನಿಟ್ಟಿನಲ್ಲಿ ಜುಲೈ 16 ರಂದು ಸಚಿವ ಪ್ರಿಯಾಂಕ್ ಖರ್ಗೆ ಅವರ ಜೊತೆ ಚರ್ಚೆ ಮಾಡುತ್ತೇನೆ ಎಂದು ಬಾಗಲಕೋಟೆ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಜಿ. ನಂಜಯ್ಯನಮಠ ತಿಳಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಹೈಕೋರ್ಟ್ ಚುನಾವಣೆ ನಡೆಸಲು ಆದೇಶ ನೀಡಿದೆ. ಚುನಾವಣಾ ಆಯೋಗ ಕೂಡ ಚುನಾವಣೆ ನಡೆಸಲು ಸಜ್ಜಾಗಿದೆ. ಇಷ್ಟಾದರೂ ಚುನಾವಣೆ ತಡ ಏಕೆ' ಎಂದು ಅವರು ಪ್ರಶ್ನಿಸಿದರು.

ಶಾಸಕರ ನಂತರದ ಸ್ಥಾನ?ಮಾನ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಮತ್ತು ಕಾರ್ಯಕರ್ತರಿಗೆ ಬರುತ್ತವೆ.

ಅಂದಾಜು ಒಂದು ಸಾವಿರದಷ್ಟು ಜಿಲ್ಲಾ ಪಂಚಾಯಿತಿ ಸದಸ್ಯರು ಹಾಗೂ ಮೂರುವರೆ ಸಾವಿರದಷ್ಟು ತಾಲ್ಲೂಕು ಪಂಚಾಯಿತಿ ಸದಸ್ಯರ ಅಧಿಕಾರಕ್ಕೆ ಅರ್ಹರಾದ ಕಾರ್ಯಕರ್ತರು ಅಧಿಕಾರ ಇಲ್ಲದೇ ಇದ್ದಾರೆ. ನಾಯಕತ್ವಕ್ಕೆ ಅರ್ಹರಾದವರಿಗೆ ನಾಯಕತ್ವ ನೀಡಬೇಕಾಗಿದೆ.

ಈ ನಿಟ್ಟಿನಲ್ಲಿ ಚುನಾವಣೆ ಅಗತ್ಯವಾಗಿವೆ. ಕಾರ್ಯಕರ್ತರ ಭಾವನೆಗಳಿಗೆ ಆದಷ್ಟು ಬೇಗ ಸ್ಪಂದಿಸಿ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದರು.

'ಜನಪ್ರತಿನಿಧಿಗಳು ಇಲ್ಲದೇ ಇರುವುದರಿಂದ ಈಗ ಅಧಿಕಾರಿಗಳೇ ಅಧಿಕಾರ ಚಲಾಯಿಸುತ್ತಿದ್ದಾರೆ.

ಸಂತುಷ್ಟ ಕಾರ್ಯಕರ್ತರು ಇದ್ದರಷ್ಟೇ ಪಕ್ಷ ಅಧಿಕಾರಕ್ಕೆ ಬರಲು ಸಾಧ್ಯ ಮತ್ತು ಅಭಿವೃದ್ಧಿಯಾಗಲು ಸಾಧ್ಯ. ಕಾರ್ಪೋರೇಷನ್ ಮತ್ತು ಬೋರ್ಡ್‌ಗಳಿಗೆ ಕಾರ್ಯಕರ್ತರನ್ನು ನೇಮಕ ಮಾಡುವ ಕಾರ್ಯ ಕೂಡ ನಡೆಯಬೇಕಿದೆ' ಎಂದು ನಂಜಯ್ಯನಮಠ ತಿಳಿಸಿದರು.

ಕೆಪಿಸಿಸಿ ಸದಸ್ಯ ಬಸವರಾಜ ಕೊಕಟನೂರ, ಮಲ್ಲಪ್ಪ ಸಿಂಗಾಡಿ, ಭೀಮಶಿ ಮಗದುಮ್, ನೀಲಕಂಠ ಮುತ್ತೂರ, ಶೇಖರ ಹಕ್ಕಲದಡ್ಡಿ, ಶಂಕರ ಕೆಸರಗೊಪ್ಪ, ರಾಹುಲ ಕಲಾಲ, ಗಿರೀಶ ಅಂಕಲಗಿ, ಅಮಿತ ನಾಶಿ, ರಾಜು ಕುಲಕರ್ಣಿ ಇದ್ದರು.

# ಕನಕ ದುರ್ಗಮ್ಮ ದೇವಸ್ಥಾನದ ಹುಂಡಿ ಹಣ ಎಣಿಕೆ, 67 ಲಕ್ಷಕ್ಕೂ ಹೆಚ್ಚು ಹಣ ಸಂಗ್ರಹ





**ಬಳ್ಳಾರಿ :** ನಗರದ ಆದಿ ದೇವತೆಯ ಕನಕ ದುರ್ಗಮ್ಮ ದೇವಸ್ಥಾನದಲ್ಲಿ ಅಳವಡಿಸಲಾಗಿದ್ದ 13 ಹುಂಡಿಗಳನ್ನು ಇಂದು ತೆರೆಯಲಾಯಿತು ಎಂದು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಗಳಾದ ಹನುಮಂತಪ್ಪ ತಿಳಿಸಿದ್ದಾರೆ.

ಇಂದು ಮುಂಜಾನೆ ಬಳ್ಳಾರಿ ಸಹಾಯಕ ಆಯುಕ್ತರು ಹಾಗೂ ದೇವಸ್ಥಾನದ ಆಡಳಿತ ಅಧಿಕಾರಿ ಪ್ರಮೋದ್, ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತರಾದ ಎಚ್ ಸವಿತಾ ಮತ್ತು ಗ್ರೇಡ್ ಟು ತಹಸಿಲ್ದಾರ್ ಅವರುಗಳ ಸಮ್ಮುಖದಲ್ಲಿ ಹುಂಡಿಯ ಬೀಗವನ್ನು ತೆರೆಯಲಾಯಿತು. ನಂತರ ಹುಂಡಿಯಲ್ಲಿ ಜಮೆಯಾಗಿದ್ದ ಹಣವನ್ನು ಎಣಿಸಲಾಗಿ ಕೇವಲ ನಾಲ್ಕು ತಿಂಗಳ ಅವಧಿಯಲ್ಲಿ ಸುಮಾರು 67,86,179 ರೂಪಾಯಿಗಳಷ್ಟು ಹಣ ಸಂಗ್ರಹ ಗೊಂಡಿದೆ ಎಂದು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಹನುಮಂತಪ್ಪ ತಿಳಿಸಿದ್ದಾರೆ.

ಹಣ ಎಣಿಕೆಯ ಸಂದರ್ಭದಲ್ಲಿ ದೇವಸ್ಥಾನದ ಸಿಬ್ಬಂದಿಗಳು ಹೋಮ್ ಗಾರ್ಡ್ಗಳು ಸೇರಿದಂತೆ ಹಲವರು ಭಾಗವಹಿಸಿದ್ದರು. ಹುಂಡಿಯ ಹಣವನ್ನು ಸಿಸಿ ಕ್ಯಾಮೆರಾಗಳ ಕಣ್ಗಾವಲಿನಲ್ಲಿ ಎಣಿಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಸೂಕ್ತ ಬಂದೋಬಸ್ತ್ ಏರ್ಪಡಿಸಲಾಗಿತ್ತು.

# ಜನಪ್ರತಿನಿಧಿಗಳ ಮೇಲೆ ಒತ್ತಡ ಹಾಕಿ: ವಿಜಯ ಸಂಕೇಶ್ವರ

**ಬಾಗಲಕೋಟೆ :** ರಾಜಕೀಯ ನಾಯಕರ ನಿಷ್ಕಾಳಜಿಯಿಂದ ಮುಳುಗಡೆ ಹೊಂದಿದ ಪ್ರದೇಶದ ಮಾರುಕಟ್ಟೆ ನಿಗದಿತ ಪ್ರಮಾಣದಲ್ಲಿ ಅಭಿವೃದ್ಧಿ ಕಂಡಿಲ್ಲ. ಅವರ ಮೇಲೆ ಒತ್ತಡ ಹಾಕುವ ಕೆಲಸವನ್ನು ವ್ಯಾಪಾರಸ್ಥರು, ಜನರು ಮಾಡಬೇಕು ಎಂದು ವಿಆರ್‌ಎಲ್ ಸಮೂಹ ಸಂಸ್ಥೆ ಚೇರಮನ್ ವಿಜಯ ಸಂಕೇಶ್ವರ ಹೇಳಿದರು.

ನಗರದ ಚರಂತಿಮಠದ ಶಿವಾನುಭವ ಮಂಟಪದಲ್ಲಿ ಭಾನುವಾರ ಬಾಗಲಕೋಟೆ ಯೂನಿಯನ್ ಆಫ್ ಮರ್ಚಂಟ್ಸ್ ಆ?ಯಂಡ್ ಎಂಟರಪ್ರೈನರ್ಸ್ ಅಸೋಸಿಯೇಷನ್ಸ್ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ನಡೆಯುತ್ತಿದ್ದ ವ್ಯಾಪಾರದ ಉತ್ಸಾಹ ಈಗ ಕಾಣಿಸುತ್ತಿಲ್ಲ. ಬೆಳೆಯಲು ಇದ್ದ ಅವಕಾಶಗಳು ಕೈತಪ್ಪಿವೆ ಎಂದರು.



ದೇಶದಲ್ಲಿ ನಮ್ಮ ಸಂಸ್ಥೆಯ 1,250 ಬ್ರ್ಯಾಂಚ್‌ಗಳಿವೆ. ಇವುಗಳ ಪೈಕಿ ಬಾಗಲಕೋಟೆ, ಗದಗ, ದಾಂಡೇಲಿ ಬ್ರ್ಯಾಂಚ್‌ಗಳು ಮಾತ್ರ ರಿವರ್ಸ್ ಗೇರಿನಲ್ಲಿವೆ. ಇದು ಬಾಗಲಕೋಟೆ ವ್ಯಾಪಾರದ ಕುಸಿತವನ್ನು ತೋರಿಸುತ್ತದೆ ಎಂದು ಹೇಳಿದರು.

200 ಎಕರೆಯಲ್ಲಿ ಒಂದೇ ಸೂರಿನಡಿ ಮಾರುಕಟ್ಟೆ ನಿರ್ಮಾಣ ಮಾಡಲಾಗುತ್ತಿದೆ ಎಂದು ಕೇಳಿದರೆ.

ಅದರಲ್ಲಿ 100 ಎಕರೆ ರಸ್ತೆ ನಿರ್ಮಾಣಕ್ಕೆ ಹೋಗುತ್ತದೆ. 50 ಎಕರೆ ಪಾರ್ಕಿಂಗ್ ಹೋದರೆ ಉಳಿದ 50 ಎಕರೆಯಲ್ಲಿ ಮಾರುಕಟ್ಟೆ ಚಿಕ್ಕದಾಗುತ್ತದೆ.

ಇನ್ನೂ ಹೆಚ್ಚಿನ ಜಾಗಕ್ಕೆ ವ್ಯಾಪಾರಸ್ಥರು ಒತ್ತಾಯ ಮಾಡಬೇಕು ಎಂದು ಸಲಹೆ ನೀಡಿದರು.

ಟ್ರುಆಲ್ಟ್ ಬಯೋಎನರ್ಜಿ ಸಂಸ್ಥಾಪಕ ವಿಜಯ ನಿರಾಣಿ ಮಾತನಾಡಿ, ವಿಜಯ ಸಂಕೇಶ್ವರ ಯುವಕರಿಗೆ ಸ್ಫೂರ್ತಿಯಾಗಿದ್ದಾರೆ. ಅವರ ಸಾಧನೆಯೇ ನನಗೆ 'ವಿಜಯ' ಎಂದು ಹೆಸರಿಡಲು ಕಾರಣವಾಗಿದೆ.


ನಿರಾಣಿ ಗ್ರೂಪ್ ಪ್ರತಿ ದಿನ 81 ಸಾವಿರ ಮೆ. ಟನ್ ಕಬ್ಬು ನುರಿಸುತ್ತದೆ. ಜಿಲ್ಲೆಗೆ ಬೇಕಾದ ಶೇ30ರಷ್ಟು ವಿದ್ಯುತ್ ಪೂರೈಕೆ ಮಾಡುತ್ತಿದೆ. ಎಥೆನಾಲ್ ಉತ್ಪಾದನೆಯಲ್ಲಿಯೂ ದಾಖಲೆ ಮಾಡಿದ್ದು, ಮುಂದಿನ ದಿನಗಳಲ್ಲಿ ಎಥೆನಾಲ್‌ನಿಂದ ಇಥಿಲಿನ್ ಉತ್ಪಾದಿಸಿ ವಿಮಾನಗಳಿಗೆ ಇಂಧನ ಪೂರೈಕೆ ಮಾಡಲಾಗುವುದು ಎಂದರು.

ಚರಂತಿಮಠದ ಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಪಂಢರಪುರದ ಪ್ರಭಾಕರ ಬೋಧಲೆ ಮಹಾರಾಜ, ಸಂಸದ ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಮಾಜಿ ಶಾಸಕ ಎಂ.ಪಿ. ನಾಡಗೌಡ, ಬಸವೇಶ್ವರ ಬ್ಯಾಂಕ್ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಅಸೋಸಿಯೇಶನ್ಸ್ ಅಧ್ಯಕ್ಷ ರವಿ ಕುಮಟಗಿ, ವಿರೂಪಾಕ್ಷ ಅಮೃತಕರ, ಪವನ ಸಿಮಿಕೇರಿ, ಶ್ರೀನಿವಾಸ ಬಳ್ಳಾರಿ ಇದ್ದರು.

# ಅಟಲ್‌ಜೀ ಮೃಗಾಲಯಕ್ಕೆ ನವ ಅತಿಥಿ ಚಿಂಟು ಗಂಡು ನೀರುಕುದುರೆ ಆಗಮನ

**ಹೊಸಪೇಟೆ :** ಕಲ್ಯಾಣ ಕರ್ನಾಟಕ ವಿಭಾಗದ ಏಕೈಕ ಸಫಾರಿ ಹೊಂದಿರುವ ಕಮಲಾಪುರದ ಶ್ರೀಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್ಗೆ ಮಂಗಳೂರು ಪಿಲಿಕುಳ ಜೈವಿಕ ಉದ್ಯಾನವನದಿಂದ ಚಿಂಟು ಎಂಬ ಗಂಡು ನೀರುಕುದುರೆ ಹೊಸ ಅತಿಥಿಯಾಗಿ ಬುಧವಾರ ಆಗಮಿಸಿದೆ.



ಮೃಗಾಲಯಕ್ಕೆ ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣಿಗಳನ್ನು ಪ್ರವಾಸಿಗರಿಗೆ ವೀಕ್ಷಿಸಲು ಅನುವು ಮಾಡಿಕೊಡಲು ಪ್ರಾಣಿವಿನಿಮಯ ಕಾರ್ಯಕ್ರಮದಡಿ ಮಂಗಳೂರು ಪಿಲಿಕುಳ ಜೈವಿಕ ಉದ್ಯಾನವನದಿಂದ ಒಂದು ಗಂಡು ನೀರುಕುದರೆಯನ್ನು ಹಸ್ತಾಂತರಿಸಿಕೊಳ್ಳಲು ಕೇಂದ್ರ ಮೃಗಾಲಯ ಪ್ರಾಧಿಕಾರ ನವದೆಹಲಿ ಅನುಮತಿ ನೀಡಿದೆ. ಹಾಗಾಗೀ 06 ವರ್ಷದ 'ಚಿಂಟು' ಎಂಬ ಗಂಡು ನೀರುಕುದುರೆ ಹೊಸ ಅತಿಥಿಯಾಗಿ ಆಗಮಿಸಿದೆ ಎಂದು ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ರಾಜೇಶ್ ನಾಯ್ಕ ತಿಳಿಸಿದ್ದಾರೆ.

# ಮನೆ ಮನೆಗೆ ಪೊಲೀಸ್ ಭೇಟಿ ಕಾರ್ಯಕ್ರಮ

**ಬನಹಟ್ಟಿ :** ಜನಸ್ನೇಹಿ ಪೊಲೀಸ್ ವ್ಯವಸ್ಥೆಯ ಭಾಗವಾಗಿ ಸಾರ್ವಜನಿಕರ ಸಮಸ್ಯೆ ದೂರು ಆಲಿಸಲು ಪೊಲಿಸ್ ಸಿಬ್ಬಂದಿಯೇ ಮನೆಬಾಗಿಲಿಗೆ ಹೋಗುವ ವಿನೂತನ ಪರಿಕಲ್ಪನೆಯ ಭಾಗವಾಗಿ ಮನೆ ಮನೆಗೆ ಪೊಲೀಸ್ ಕಾರ್ಯಕ್ರಮಕ್ಕೆ ಜುಲೈ 16 ರಂದು ಬಂಡಿಗಣಿ ಗ್ರಾಮದಲ್ಲಿ ಚಾಲನೆ ನೀಡಲಾಯಿತು. ಬನಹಟ್ಟಿ ಠಾಣಾಧಿಕಾರಿ ಶಾಂತಾ ಹಳ್ಳಿ ಮತ್ತು ಸಿಬ್ಬಂದಿ ಹಾಗು ಯಲ್ಲಟ್ಟಿ ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಹಾಗು ಸದಸ್ಯರು ತೆರಳಿ ಜಾಗೃತಿ ಮೂಡಿಸಿದರು.

ನಂತರ ಸೈಬರ್ ಅಪರಾಧ, ಮಾದಕ ವಸ್ತುಗಳ ಸಾಗಣೆ, ಪೋಸ್ಕೋ ಕಾಯ್ದೆ, ಮನೆಗಳ್ಳತನ, ಸರಗಳ್ಳತನ, ರಸ್ತೆ ಸಂಚಾರ ನಿಯಮ, ಹೆಲ್ಮೆಟ್ ಧರಿಸುವುದು ಮುಂತಾದ ವಿಷಯಗಳ ಬಗ್ಗೆ ಅರಿವು ಮೂಡಿಸಿದರು. ಮನೆಯಲ್ಲಿರುವವರ ಹೆಸರು ಹಾಗು ಮೊಬೈಲ್ ನಂಬರ್ ಪಡೆದುಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಬನಹಟ್ಟಿ ಠಾಣೆಯ ಸಿಬ್ಬಂದಿ, ಯಲ್ಲಟ್ಟಿ ಗ್ರಾಮ ಪಂಚಾಯತ್ ಅಧ್ಯಕ್ಷ ಮಹಾದೇವ ಮೋಪಗಾರ, ಪಿಡಿಓ ನಾಟಿಕರ, ಸದಸ್ಯರು ಹಾಗು ಗ್ರಾಮಸ್ಥರು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.



"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State

Designed by MKG-9535762618